# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity
BENEFITS OF ADVERTISING
in Local Leading HAMPI TIMES Newspaper
1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options
ಹಂಪಿ ಟೈಮ್ಸ್
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 Volume:01 • ಸಂಚಿಕೆ:172 Issue:172 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 02.12.2023 02.12.2023 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2







ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ. ಕೈಯಲ್ಲೊಂದು
ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


PLACE YOUR AD
HOUSE RENT / SALE / LEASE, CHANGE OF NAME,
Notice Advertisement. & EVENT COVERAGE
Contact
9448633038
Near Valmiki Circle,
HOSAPETE-583201
Email:hampitimes@gmail.com


# ಹಂಪಿಯಲ್ಲಿ ರಾಜ್ಯಮಟ್ಟದ ತರಬೇತಿ ಕೇಂದ್ರ

## ಯುವ ಸಬಲೀಕರಣ ಸಚಿವ ಬಿ.ನಾಗೇಂದ್ರ ಹೇಳಿಕೆ | 20 ಎಕರೆ ಜಾಗದಲ್ಲಿ ಯುವಜನ ಸೇವಾ ತರಬೇತಿ

## ಕಲೆ ಪ್ರತಿಭೆ ಅನಾವರಣಕ್ಕೆ ಯುವಜನೋತ್ಸವ ಉತ್ತಮ ವೇದಿಕೆ | 371–ಜೆ ಅಡಿ ಸೌಲಭ್ಯ ಪಡೆಯಿರಿ




**ಹಂಪಿ ಟೈಮ್ಸ್ ಬಳ್ಳಾರಿ**
ಹಂಪಿಯಲ್ಲಿ ರಾಜ್ಯ ಮಟ್ಟದ ಯುವಜನ ಸೇವಾ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಲಾಗುವುದು ಎಂದು ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಸಂಘಗಳ ಒಕ್ಕೂಟ, ವಿವೇಕಾನಂದ ಯುವಕ ಸಂಘ ಹಾಗೂ ಸ್ಥಳೀಯ ಯುವಕ ಸಂಘಗಳ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ಬಿಡಿಎಎ ಪುಟ್‌ಬಾಲ್ ಮೈದಾನ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ–2023 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯುವ ಸಬಲೀಕರಣ ಇಲಾಖೆಯಿಂದ ಯುವಜನರನ್ನು ಪ್ರೋತ್ಸಾಹಿಸಲು ಮತ್ತು ಅವರ ಅಧಿವೃದ್ಧಿಗಾಗಿ ರಾಜ್ಯ ಮಟ್ಟದ ಯುವಜನ ಸೇವಾ ತರಬೇತಿ ಕೇಂದ್ರ ಸ್ಥಾಪನೆಗೆ ಬೇಕಾದ 20 ಎಕರೆ ಜಾಗವನ್ನು ಹಂಪಿ ಅಥವಾ ಬಳ್ಳಾರಿ ಭಾಗದಲ್ಲಿ ಗುರುತಿಸಲಾಗುವುದು ಎಂದು ತಿಳಿಸಿದ ಸಚಿವರು, ಅದೇ ರೀತಿಯಾಗಿ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಬಳ್ಳಾರಿಯಲ್ಲಿ ಹಮ್ಮಿಕೊಳ್ಳಲು ಇಚ್ಛಾಶಕ್ತಿ ಇದೆ. ಕಲಿಕೆ ಒಂದೇ ಮಾರ್ಗವಲ್ಲ, ಬದಲಾಗಿ ಅನೇಕ ರಂಗಗಳಲ್ಲಿ ಯುವಕರು ತಮ್ಮನ್ನು ತಾವು ತೊಡಗಿಸಿಕೊಂಡು ಮುನ್ನಡೆಯಬೇಕು. ಸಂಕಲ್ಪ ಇಟ್ಟುಕೊಂಡು ಗುರಿ ತಲುಪಿದರೆ, ಯಶಸ್ಸು ನಿಮ್ಮದಾಗುತ್ತದೆ ಎಂದು ಕಿವಿಮಾತು ಹೇಳಿದರು.

ಕುಟುಂಬ ಹಿನ್ನಲೆಯಲ್ಲಿ ಅನೇಕ ಸಮಸ್ಯೆಗಳಿದ್ದರೂ, ಯುವಜನ ತಮ್ಮ ಗುರಿಯನ್ನು ತಲುಪಲು ಛಲ ಬಿಡದೆ, ತಮ್ಮ ಕನಸುಗಳನ್ನು ಕಟ್ಟಿಕೊಳ್ಳುವ ಕೆಲಸ ಮಾಡಬೇಕು. ಒಳ್ಳೆಯ ಗುಣ ಮತ್ತು ಸಂಸ್ಕೃತಿ ಅಳವಡಿಸಿಕೊಂಡಾಗ ಮಾತ್ರ ಎಲ್ಲವನ್ನೂ ಪಡೆಯಲು ಸಾಧ್ಯ ಎಂದು ವಿಶ್ವಾಸ ಮೂಡಿಸಿದರು.

ಕಲ್ಯಾಣ ಕರ್ನಾಟಕ ಭಾಗಕ್ಕೆ 371–ಜೆ ಅಡಿಯಲ್ಲಿ ಯುವಕ ಯುವತಿಯರು ಸರ್ಕಾರದ ಸೌಲಭ್ಯ ಪಡೆದು–ಕೊಂಡು ಶೈಕ್ಷಣಿಕವಾಗಿ ಜೀವನ ರೂಪಿಸಿಕೊಳ್ಳಬೇಕು. ಪೋಷಕರ ವಿಶ್ವಾಸಕ್ಕೆ ಅಗೌರವ ತರಬಾರದು. ಯುವ ಸಮುದಾಯವು ಮೊಬೈಲ್ ದಿಂದ ಒಳಿತಾಗುವ ಉಪಯುಕ್ತ ಮಾಹಿತಿಯನ್ನು ಮಾತ್ರ ಬಳಸಿಕೊಳ್ಳಬೇಕು. ಯುವಸಮುದಾಯವು ಮುಖ್ಯವಾಗಿ ಮಾದಕ ವಸ್ತುಗಳಿಂದ ದೂರವಿರಬೇಕು. ಈಗಾಗಲೇ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಜೊತೆ ಹುಕ್ಕಾ ಬಾರ್ ನಿಷೇಧ, ಬೀಡಿ ಸಿಗರೇಟ್ ಸೇವನೆ ನಿರ್ಬಂಧ ಹಾಗೂ ಶಾಲೆ ಕಾಲೇಜುಗಳ ಸುತ್ತ ಮುತ್ತ ಮಾರಾಟ ಮತ್ತು ನಿಷೇಧದ ಕುರಿತು ಚರ್ಚಿಸಲಾಗಿದೆ ಎಂದು ವಿವರಿಸಿದರು. ಯುವಕರು, ತಮ್ಮಲ್ಲಿನ ಕಲೆ ಮತ್ತು ಪ್ರತಿಭೆಗಳನ್ನು ಅನಾವರಣಗೊಳಿಸಲು ಯುವಜನೋತ್ಸವದಂತಹ ಕಾರ್ಯಕ್ರಮ ಉತ್ತಮ ವೇದಿಕೆಯಾಗಿದೆ. ಯುವಕ–ಯುವತಿಯರು ಅವುಗಳನ್ನು ಬಳಸಿಕೊಂಡು ತಮ್ಮ ಕಲೆಗಳ ಪ್ರದರ್ಶನ ನೀಡಬೇಕು ಎಂದು ಕರೆ ನೀಡಿದರು.

ನಂತರದಲ್ಲಿ ವಿವಿಧ ಶಾಲಾ – ಕಾಲೇಜು ವಿದ್ಯಾರ್ಥಿಗಳಿಂದ ಜಾನಪದ ನೃತ್ಯ, ಕಥೆ ಬರೆಯುವುದು, ಪೋಸ್ಟರ್ ಮೇಕಿಂಗ್, ಘೋಷಣೆ, ಛಾಯಾಗ್ರಹಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಕ್ರಮವಾಗಿ ಬಹುಮಾನ ವಿತರಿಸಲಾಯಿತು.

ಮಹಾನಗರ ಪಾಲಿಕೆ ಉಪಮೇಯರ್ ಬಿ.ಜಾನಕಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಕೆ.ಗ್ರೇಸಿ, ಮಹಾನಗರ ಪಾಲಿಕೆ ಸದಸ್ಯರು ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು, ಯುವಕರು ಹಾಗೂ ಮತ್ತಿತರು ಉಪಸ್ಥಿತರಿದ್ದರು.




ಮೈಕ್ರೋ ನ್ಯೂಸ್

## ಡಿ.2, 3 ರಂದು ಪುತ್ತಿಗೆ ಮಠಾಧೀಶ 1008 ಶ್ರೀ ಸುಗುಣೇಂದ್ರತೀರ್ಥ ಹೊಸಪೇಟೆಗೆ

**ಹಂಪಿ ಟೈಮ್ಸ್ ಹೊಸಪೇಟೆ**
ಉಡುಪಿ ಶ್ರೀಕೃಷ್ಣಮಠದ ಪೂಜಾ ಪರ್ಯಾಯ ಪೀಠಾರೋಹಣ ಮಾಡಲಿರುವ ಪುತ್ತಿಗೆ ಮಠದ ಶ್ರೀ 1008 ಸುಗುಣೇಂದ್ರತೀರ್ಥರು ಹಾಗೂ ಕಿರಿಯ ಶ್ರೀಗಳಾದ 1008 ಸುಶ್ರೀಂದ್ರತೀರ್ಥ ಶ್ರೀಪಾದಂಗಳು ಪರ್ಯಾಯ ಸಂಚಾರದ ಪ್ರಯುಕ್ತ ಡಿ.2 ಮತ್ತು 3 ರಂದು ಹೊಸಪೇಟೆ ನಗರಕ್ಕೆ ಆಗಮಿಸಲಿದ್ದಾರೆ ಎಂದು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೆ.ದಿವಾಕರ ತಿಳಿಸಿದ್ದಾರೆ.

ಪುರ ಪ್ರವೇಶ ಮಾಡುವ ಶ್ರೀಗಳನ್ನು ಡಿ 2 ರಂದು ಸಂಜೆ 5 ಗಂಟೆಗೆ ಗಾಂಧಿಕಾಲೋನಿಯ ರಾಯರ ಮಠಕ್ಕೆ ಪೂರ್ಣಕುಂಭ ಸ್ವಾಗತ ಮಾಡಲಾಗುವುದು, ಸಾಮೂಹಿಕ ಪಾದಪೂಜೆ, ಅನುಗ್ರಹ ಆರ್ಶಿವಚನ ಹಾಗೂ ಶ್ರೀಗಳಿಂದ ಫಲಮಂತ್ರಾಕ್ಷತೆ ವಿತರಣೆಯಾಗಲಿದೆ. ಅಂ–ದು ರಾತ್ರಿ 7.30ಕ್ಕೆ ಎಂ.ಪಿ.ಪ್ರಕಾಶ ನಗರದ ಪಂಚಮುಖಿ ಲೇಔಟ್‌ನ ಧ್ಯಾನಂಜನೇಯ ದೇವಸ್ಥಾನದಲ್ಲಿ ಸಾಮೂಹಿಕ ಪಾದಪೂಜೆ, ತೊಟ್ಟಿಲಸೇವೆ ಹಾಗೂ ಶ್ರೀಗಳಿಂದ ಫಲಮಂತ್ರಾಕ್ಷತೆ ವಿತರಣೆಯಾಗಲಿದೆ.

ಡಿ 3 ರಂದು ಬೆಳಿಗ್ಗೆ 11 ಗಂಟೆಯ ವರೆಗೂ ಭಕ್ತರ ಮನೆಯಲ್ಲಿ ಪಾದಪೂಜೆ, 11 ಗಂಟೆಗೆ ಜಂಬೂನಾಥ ರಸ್ತೆಯ ಶ್ರೀಕೃಷ್ಣ ಮಠದಲ್ಲಿ ಸಾಮೂಹಿಕ ಪಾದಪೂಜೆ, ಶ್ರೀಗಳ ಅನುಗ್ರಹ ಆರ್ಶಿವಚನ ನಡೆಯಲಿದೆ ಎಂದು ತಿಳಿಸಿದ್ದಾರೆ.

## ಡಿ 3 ರಂದು ಡಾ.ಎಸ್. ಬಿ.ಹಂದ್ರಾಳ ರಿಂದ ವಿಶೇಷ ಯೋಗ ಶಿಬಿರ

**ಹಂಪಿ ಟೈಮ್ಸ್ ಹೊಸಪೇಟೆ**
ಪತಂಜಲಿ ಯೋಗ ಸಮಿತಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಡಿಸೆಂಬರ್ 3 ರಂದು ವಿಶೇಷ ಯೋಗ ತರಬೇತಿಯನ್ನು ಹಮ್ಮಿಕೊಂಡಿದೆ ಎಂದು ರಾಜ್ಯ ಯುವ ಪ್ರಭಾರಿ ಕಿರಣ್‌ಕುಮಾರ ತಿಳಿಸಿದ್ದಾರೆ.

ನಗರದ ರೈಲ್ವೆ ನಿಲ್ದಾಣ ಸಮೀಪ ಫ್ರೀಡಂ ಪಾರ್ಕ್‌ನಲ್ಲಿ ಬೆಳಿಗ್ಗೆ 5.30 ರಿಂದ 7.15ರವರೆಗೆ ಪತಂಜಲಿ ರಾಜ್ಯ ಸಮಿತಿಯ ಸದಸ್ಯ ಹಾಗೂ ವಿಜಯನಗರ ಗದಗ ಜಿಲ್ಲಾ ಉಸ್ತುವಾರಿ ಡಾ.ಎಸ್.ಬಿ.ಹಂದ್ರಾಳ ವಿಶೇಷ ಯೋಗ ತರಬೇತಿ ನೀಡಲಿದ್ದಾರೆ. ವಾತ ಪಿತ್ತ, ಕಫಗಳೆಂಬ ತ್ರಿದೋಷಗಳಿಗೆ ಯೋಗದಿಂದ ಪರಿಹಾರ ಹಾಗೂ ಮನೆ ಮದ್ದುಗಳ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ.

ತ್ರಿದೋಷಗಳಿಂದ ಆಗುವ ಸಂಧಿವಾತ, ಸೊಂಟನೋವು, ಬೆನ್ನು ಮತ್ತು ನರಗಳ ದೌರ್ಬಲ್ಯತೆಗಳಿಗೆ ಪರಿಹಾರ, ಮನೆ ಮದ್ದು, ಆಹಾರ ಪದ್ಧತಿ, ವಾತ ಶಮನ ಮುದ್ರೆಗಳು ವಿಶೇಷ ಪ್ರಾಣಾಯಾಮಗಳ ವಿಶೇಷ ಆಸನಗಳ ಬಗ್ಗೆಯೂ ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.

# ಏಡ್ಸ್ ನಿರ್ಮೂಲನೆಗೆ ಅರಿವೇ ಔಷಧ

## ಜಾಗೃತಿ ಜಾಥಾಕ್ಕೆ ನ್ಯಾಯಧೀಶರಾದ ಕಿಶನ್ ಬಿ. ಮೂಡಲಗಿ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**
ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಹಣಾ ಘಟಕ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಶುಕ್ರವಾರ ಹೊಸಪೇಟೆ ನಗರದಲ್ಲಿ ಜಾಗೃತಿ ಜಾಥಾ ಮೂಲಕ ಅರಿವು ಮೂಡಿಸಲಾಯಿತು.

ಜಾಗೃತಿ ಜಾಥಾ: ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಚೇರಿ ಆವರಣದಲ್ಲಿ ನಡೆದ ಜಾಗೃತಿ ಜಾಥಕ್ಕೆ ವಿಜಯನಗರ ಜಿಲ್ಲೆ ಪ್ರಧಾನ ಸಿವಿಲ್ ನ್ಯಾಯಧೀಶರಾದ ಕಿಶನ್ ಬಿ. ಮೂಡಲಗಿ ಅವರು ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದಶಕಗಳಿಂದ ಬಾಧಿಸುತ್ತಿರುವ ಹೆಚ್.ಐ.ವಿ/ ಏಡ್ಸ್ ಮಹಾಮಾರಿಯ ನಿರ್ಮೂಲನೆಗೆ ಚಿಕಿತ್ಸೆ ಎಂದರೆ ಅರಿವು ಮತ್ತು ಜನರಲ್ಲಿ ಜಾಗೃತಿ ಮೂಡಿಸುವುದಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿವಿಧ ಎನ್.ಜಿ.ಓ. ಗಳು ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತ್ತಿದೆ ಹಾಗೂ ಉತ್ತಮ ಸೇವೆಗಳನ್ನು ನೀಡುತ್ತಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ >>4

# ಹಳೇ ವಿದ್ಯಾರ್ಥಿಗಳಿಂದ ಸುವರ್ಣ ಸಂಭ್ರಮಾಚರಣೆ

## ನಿವೃತ್ತ ಐ.ಎ.ಎಸ್. ಅಧಿಕಾರಿ ವಿ.ಚಂದ್ರಶೇಖರ ಹೇಳಿಕೆ | ಡಿ.4, 5ರಂದು

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಮಹಾವಿದ್ಯಾಲಯದಲ್ಲಿ 50 ವರ್ಷಗಳ ಹಿಂದೆ ಪದವಿ ವ್ಯಾಸಂಗಮಾಡಿ, ದೇಶ ವಿದೇಶದಲ್ಲಿರುವ ಹಾಗೂ ನಾನಾ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ವೃತ್ತಿ ಹಾಗೂ ನಿವೃತ್ತಿಯಲ್ಲಿರುವ ಹಳೆಯ ವಿದ್ಯಾರ್ಥಿಗಳಿಂದ ಡಿ.4 ಮತ್ತು 5ರಂದು ಟಿ.ಬಿ.ಡ್ಯಾಂನ ಮಯೂರ ಹೋಟೆಲ್ ನಲ್ಲಿ ಸುವರ್ಣಮಹೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಐ.ಎ.ಎಸ್. ಅಧಿಕಾರಿ ವಿ.ಚಂದ್ರಶೇಖರ್ ತಿಳಿಸಿದ್ದಾರೆ.

ಆನೆಗುಂದಿ ಸಂಸ್ಥಾನದ ಒಡೆಯ ಶ್ರೀಕೃಷ್ಣದೇವರಾಯ ಹಾಗೂ ಕಾಲೇಜಿನ ಹಿರಿಯ ಉಪನ್ಯಾಸಕರಾದ ಡಿ.ಚೆನ್ನಬಸವನಗೌಡ, ಡಿ.ಹೇಮಪ್ಪ, ಗುರುಬಸಪ್ಪ, ಆರ್. ಆರ್.ವರ್ಮಾ, ಪಿ.ವಿ.ಶ್ರೀನಿವಾಸರಾವ್, ಜಂಬನಗೌಡ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. 2 ದಿನಗಳ ಸಮಾರಂಭದಲ್ಲಿ ಪ್ರಸ್ತುತ ವಿದ್ಯಾಮಾನಗಳ ಕುರಿತು ಚರ್ಚೆ, ಸುಗಮ ಸಂಗೀತ, ಹಾಸ್ಯ ಬರಹಗಳ ಅನಾವರಣ, ಭಾಷಣ, ಅನುಭವ ಹಂಚಿಕೆ, ಉಭಯ ಕುಶಲೋಪರಿ ಹಾಗೂ ರಸಮಂಜರಿ ಕಾರ್ಯಕ್ರಮ ನೆರವೇರಲಿವೆ.

ಕರ್ನಾಟಕ ನಾಮಕರಣದ ಸುವರ್ಣ ಸಂಭ್ರಮಾಚರಣೆಯ ಈ ಸಂದರ್ಭದಲ್ಲಿ ವಿಜಯನಗರ ಕಾಲೇಜಿನ ವಿದ್ಯಾರ್ಥಿಗಳು ಸಹ 1973ರಲ್ಲಿ ಪದವಿ ಮುಗಿಸಿ, 50 ವರ್ಷ ಕಳೆದಿರುವ ಈ ಸಂದರ್ಭದಲ್ಲಿ ವಿಶೇಷ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ.




ಹಂಪಿ ಟೈಮ್ಸ್ HAMPI TIMES

## ವಚನ ಅರಿವು

### ನಿಮ್ಮನೆತ್ತ ಬಲ್ಲರು?

**ನೀರ ಕಂಡಲ್ಲಿ ಮುಳುಗುವರಯ್ಯಾ,**
**ಮರನ ಕಂಡಲ್ಲಿ ಸುತ್ತುವರಯ್ಯಾ,**
**ಬತ್ತುವ ಜಲವ ಒಣಗುವ ಮರನ ಮಚ್ಚಿದವರು**
**ನಿಮ್ಮನೆತ್ತ ಬಲ್ಲರು? ಕೂಡಲಸಂಗಮದೇವಾ!**

**– ಬಸವಣ್ಣ**

ಮನುಷ್ಯ ತನ್ನ ಸಂಕಟಗಳಿಗೆ ತಾನೇ ಕಾರಣವೆಂಬುದನ್ನು ಮರೆತು ಕಣ್ಣಿಗೆ ಕಾಣುವ ದೈವಗಳ ಮೊರೆ ಹೋಗುತ್ತಾನೆ. ತನ್ನ ಅಸಹಾಯಕತೆಗೆ ದೇವರು ಕಾರಣ ಎಂದು ನಂಬಿ, ದೇವರನ್ನು ಗುಡಿ, ವಿಗ್ರಹ, ಗಿಡ, ಮರಗಳಲ್ಲಿ ಕಲ್ಪಿಸಿಕೊಂಡು ತನ್ನ ಸಂಕಟಗಳ ನಿವಾರಣೆಗೆ ಹಲವಾರು ಬಗೆಯ ಹರಕೆಗಳನ್ನು ಹೊತ್ತುಕೊಂಡು ಹಲವು ಬಗೆಯ ವ್ರತ, ನೇಮಗಳನ್ನು ಆಚರಿಸುವ ಪ್ರಯತ್ನ ಮಾಡುತ್ತಾನೆ. ಹೀಗೆ ಆಚರಣೆ ಮಾಡುವುದು ಕೂಡ ಯಾರೋ ನಂಬಿಸಿದ ಹಿನ್ನೆಲೆಯಲ್ಲಿಯೆ ಅನ್ನುವುದು ಗಮನಾರ್ಹವಾದುದು. ಹೊಳೆ, ಹಳ್ಳ, ಕೊಳ್ಳಗಳಲ್ಲಿ ಮುಳುಗಿ ಸ್ನಾನ ಮಾಡುವುದು, ಜಪತಪಗಳನ್ನು ಮಾಡುವುದು, ಪೂಜೆ, ಪುನಸ್ಕಾರಗಳನ್ನು ಮಾಡುವುದು, ಕೆಲವು ಮರಗಳಲ್ಲಿ ದೇವರು ಇರುತ್ತಾನೆ ಎಂದು ನಂಬಿ ದಾರಸುತ್ತಿ, ಕಂಕಣಕಟ್ಟಿ, ವಿವಿಧ ಬಗೆಯ ಪೂಜೆಗಳನ್ನು ಮಾಡುವುದನ್ನು ನೋಡುತ್ತೇವೆ. ಇಂತಹ ಪೂಜೆಯಿಂದ ನಿಮಗೆ ದೇವರು ಒಲಿಯುವುದಿಲ್ಲ. ನೀರು ಬಿಸಿಲಿಗೆ ಬತ್ತಲೇಬೇಕು, ಮರ ಒಣಗಲೇಬೇಕು. ಬತ್ತುವ ನೀರನ್ನು ಬತ್ತದಂತೆ, ಒಣಗುವ ಮರವನ್ನು ಒಣಗದಂತೆ ಕಾಪಾಡಿಕೊಳ್ಳಲಾಗದ ನೀರು, ಮರಗಳಲ್ಲಿ ದೇವರು ಇಲ್ಲ. ನೀವು ಆಚರಣೆಯ ಭ್ರಮೆಯಲ್ಲಿದ್ದೀರಿ, ಈ ಭ್ರಮೆಯಿಂದ ಹೊರಬಂದರೆ ಅರಿವಿನ ದಾರಿ ಸಿಗುತ್ತದೆ ಎನ್ನುತ್ತಾರೆ ಬಸವಣ್ಣನವರು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

# ಮಕ್ಕಳ ಓದು–ಪಾಲಕರ ಜೊತೆ ಜೊತೆಯಲಿ




**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು
soppi.mata@gmail.com

ಮಗು ಶೈಕ್ಷಣಿಕವಾಗಿ ನಿರ್ಧಿಷ್ಟ ಗುರಿ ತಲುಪಲು ಅತ್ಯಂತ ಅಗತ್ಯವಾದ ಕೌಶಲವೆಂದರೆ ಓದು. ಅದಕ್ಕೆ ತರಗತಿ ಕೊಠಡಿಗಳಲ್ಲಿ ಶಿಕ್ಷಕರು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುತ್ತಾರೆ. ಆ ನಿಟ್ಟಿನಲ್ಲಿ ಪಾಲಕರು ಕೈ ಜೋಡಿಸಿದಲ್ಲಿ ಹೆಚ್ಚು ಫಲ ಕಾಣಬಹುದು. ಪಾಲಕರು ಮಕ್ಕಳನ್ನು ಸರಿಯಾಗಿ ಅರ್ಥಮಾಡಿಕೊಂಡು, ಸರಿಯಾದ ಸಮಯಕ್ಕೆ ಗಮನ ಹರಿಸಿ ಮಾರ್ಗದರ್ಶನ ನೀಡಿದಲ್ಲಿ ಯಶಸ್ವಿ ಓದುಗರನ್ನು ರೂಪಿಸಬಹುದು.

ಪುಟಾಣಿ ಅನು ಕೇವಲ ಮೂರು ವರ್ಷದವಳು. ಆಕೆಯ ತಂದೆ–ತಾಯಿ, ಹಿರಿಯರೆಲ್ಲರೂ ಆಕೆಗಾಗಿ ಕೆಲ ಸಮಯ ಮೀಸಲಿರಿಸಿದ್ದರಿಂದ ಆಕೆ ಈಗಾಗಲೇ ಐದು ಪುಸ್ತಕಗಳನ್ನು ಓದಿದ್ದಾಳೆ. ಅರೆ! ಮೂರು ವರ್ಷದ ಹುಡುಗಿ ಅದು ಹೇಗೆ ಪುಸ್ತಕ ಓದಿದಳು?. ಎಂದು ಅಚ್ಚರಿ ಪಡುತ್ತಿರುವಿರಲ್ಲವೇ, ಆಕೆ ನೇರವಾಗಿ ಆ ಪುಸ್ತಕಗಳನ್ನು ಓದಲಿಲ್ಲ. ಪಾಲಕರು ಆಕೆ ಮುಂದೆ ಓದಿ, ಅರ್ಥಮಾಡಿಸಿದ್ದಾರೆ. ಪೋಷಕರು ಮತ್ತು ಮಗುವಿಗೆ ಹತ್ತಿರವಾದವರು ಮಗುವಿನ ಮುಂದೆ ಓದಬೇಕು. ಮಗು ಚಿತ್ರವನ್ನು ಅರ್ಥಮಾಡಿಕೊಂಡಾಗ, ಅದರ ಹಿಂದಿನ ಕಥೆಯನ್ನು ವಿವರಿಸಬೇಕು. ಈ ರೀತಿ ಪೋಷಕರು ಪುಸ್ತಕ ಓದಿದರೆ, ಮಕ್ಕಳ ಆಸಕ್ತಿ ಅರಳುತ್ತದೆ. ಅದೇ ರೀತಿ ಅನು ಪುಟ್ಟ ಐದು ಪುಸ್ತಕ ಓದಿರುವುದು.

**ಓದಿನ ಆನಂದ:–**

ಓದು ಒಂದು ವಿಶಿಷ್ಟವಾದ ಕಲೆ. ಜೀವನ ಕಲೆಗೊಂದು ಅತ್ಯಮೂಲ್ಯವಾದ ಕೊಡುಗೆ ನೀಡುತ್ತದೆ. ಬದುಕಿಗೆ–ವ್ಯಕ್ತಿಗೆ–ವ್ಯಕ್ತಿತ್ವಕ್ಕೆ ಅಪೂರ್ವ ಬೆಳಕನ್ನು ಕೊಡುತ್ತದೆ. ಬಾಲ್ಯದಲ್ಲಿಯೇ ಮಕ್ಕಳನ್ನು ಓದಿನತ್ತ ಆಕರ್ಷಿತರಾಗುವಂತೆ ಮಾಡಿದಲ್ಲಿ ಅದರಿಂದಾಗುವ ಲಾಭವನ್ನು ಅಳೆಯಲು ಸಾಧ್ಯವೇ ಇಲ್ಲ. ಮಕ್ಕಳು ಪ್ರತಿ ಸಾರಿ ಓದಿದಾಗಲೂ ಅವರ ಮೆದುಳಿಗೆ ಮೇವು ಸಿಗುವುದರ ಜೊತೆಗೆ ವ್ಯಾಯಾಮವೂ ಆಗುತ್ತದೆ. ಅದು ಹೇಗಿರುತ್ತದೆಂದರೆ ಬೈಕ್‌ನ್ನು ಡ್ರೈವ್ ಮಾಡಿದಂತೆ ಇಲ್ಲವೇ ಈಜಾಡಿದಾಗ ಸಿಗುವ ಆನಂದವನ್ನು ನೀಡುತ್ತದೆ.

ಓದಿದಂತೆಲ್ಲಾ ಮಗು ಬುದ್ಧಿವಂತಿಕೆಯಲ್ಲಿ ಸ್ಮಾರ್ಟ್ ಆಗುತ್ತದೆ. ಓದುವುದರಿಂದ ಮಗುವಿನಲ್ಲಿ ಶಬ್ಧಭಂಡಾರ ಹೆಚ್ಚಾಗುತ್ತದೆ. ಒತ್ತಡ ಕಡಿಮೆಯಾಗಿ ತಾರ್ಕಿಕವಾಗಿ ಯೋಚಿಸುವ ಶಕ್ತಿ ಬೆಳೆಯುತ್ತದೆ. ಬಹಳ ಮುಖ್ಯವಾಗಿ ನೆನಪಿನ ಶಕ್ತಿಯನ್ನು ವೃದ್ಧಿಸುತ್ತದೆ.

**ಪಾಲಕರ ಜೊತೆ ಜೊತೆಯಲಿ. . .**

ಮಕ್ಕಳಿಗೆ ಓದುವ ಕೌಶಲವನ್ನು ಸರಿಯಾಗಿ ಕಲಿಸಿದರೆ ಅರ್ಧ ಗೆಲುವು ಸಾಧಿಸಿದಂತೆ. ಮಗುವಿನ ಜೀವನದಲ್ಲಿ ಮೊಟ್ಟ ಮೊದಲಿಗೆ ಪ್ರಭಾವ ಬೀರುವವರೆಂದರೆ ತಂದೆ–ತಾಯಿಗಳು. ಮಕ್ಕಳನ್ನು ಓದಿನ ಹಾದಿಯಲ್ಲಿ ಪಯಣಿಸುವಂತೆ ಮಾಡುವ ಮೊದಲ ಜವಾಬ್ದಾರಿ ಪಾಲಕರದ್ದು. ಪೋಷಕರು ಮೊದಲು ತಾವು ಓದುವುದರಿಂದ ನಂತರ ಮಕ್ಕಳಿಂದ ಓದಿಸುವುದರಿಂದ ಮಕ್ಕಳಲ್ಲಿ ಅಪಾರ ಪ್ರಮಾಣದ ಬದಲಾವಣೆ ತರಬಹುದು. ತಂದೆ–ತಾಯಿ ಓದುತ್ತಿರುವುದನ್ನು ಕಂಡು ಮಕ್ಕಳು ಪ್ರೇರಿತರಾಗುತ್ತಾರೆ. ಅದರ ಮಹತ್ವ ಅರಿತು ಅದರತ್ತ ತಾವಾಗಿಯೇ ವಾಲುತ್ತಾರೆ. ಮಕ್ಕಳನ್ನು ಸದಾ ಓದು ಓದು ಎಂದು ಒತ್ತಡ ಹಾಕುವುದಕ್ಕಿಂತ ಅವರಾಗಿಯೇ ಓದುವಂತೆ ಮಾಡುವುದು ಪಾಲಕರ ಬುದ್ಧಿವಂತಿಕೆ ಅವಲಂಬಿಸಿದೆ.

ಬಹಳಷ್ಟು ಪಾಲಕರ ಬಹು ದೊಡ್ಡ ಪ್ರಶ್ನೆ ಎಂದರೆ "ಮಕ್ಕಳಲ್ಲಿ ಓದುವ ಕೌಶಲ ಹೆಚ್ಚಿಸುವುದು ಹೇಗೆ?" ಎಂಬುದಾಗಿದೆ. ಅದಕ್ಕೆ ಪ್ರತಿದಿನ ಕನಿಷ್ಠ 30 ನಿಮಿಷ, ಮನೆಯವರೆಲ್ಲಾ, ಒಂದು ಸಮಯದಲ್ಲಿ, ಒಂದೆಡೆ ಕುಳಿತುಕೊಂಡು, ಮೌನ ಓದನ್ನು ಓದಬೇಕು. ಇಲ್ಲವೇ ಒಬ್ಬರು ಜೋರಾಗಿ ಓದಿದಾಗ ಉಳಿದವರು ಆಲಿಸಬೇಕು. ಮಗುವನ್ನು ಓದಲು ಹಚ್ಚಿದಾಗ ನಡು ನಡುವೆ ಕೆಲವು ಪ್ರಶ್ನೆಗಳನ್ನು ಹಾಕುತ್ತ ಮುಂದೆ ಸಾಗಿದರೆ ಸಾಕು. ಮಕ್ಕಳು ಓದಿನತ್ತ ಆಕರ್ಷಿತರಾಗಲು ಪಾಲಕರು ಕೆಲವು ದಾರಿಗಳನ್ನು ಅನುಸರಿಸಬೇಕು. ಅವುಗಳಲ್ಲಿ ಬಹು ಮುಖ್ಯವಾಗಿ ಕಾಣುವವೆಂದರೆ.

ಬರೀ ಓದಲ್ಲ ಜೊತೆಗೆ ಓದಿನ ಚರ್ಚೆ:– ಮಕ್ಕಳು ಏನಾದರೂ ಓದಿಕೊಳ್ಳಲಿ ಎಂದು ಕಡೆಗಣಿಸುವುದು ತರವಲ್ಲ. ಅವರೇನು ಓದುತ್ತಿದ್ದಾರೆ?. ಎಂಬುದನ್ನು ಅವರೊಂದಿಗೆ ಕುಳಿತು, ಅವರ ಜೊತೆ ಚರ್ಚಿಸುತ್ತ ವಿಷಯ ತಿಳಿದುಕೊಳ್ಳಬೇಕು. ನಾವು ಏನು ಓದುತ್ತಿದ್ದೇನೆ ಎಂಬುದನ್ನು ಅಪ್ಪ–ಅಮ್ಮ ಗಮನಿಸುತ್ತಿದ್ದಾರೆ ಎಂಬುದು ಅವರಿಗೆ ಅರ್ಥವಾಗಬೇಕು. ಅತ್ತ ಗಮನ ಕೊಡದಿದ್ದರೆ ಪಾಲಕರು ತಾನೇನು ಓದುತ್ತೇನೆ ಎಂಬುದನ್ನು ನೋಡುವುದಿಲ್ಲ ಎಂದು ಉದಾಸೀನ ಮಾಡುವ ಮನೋಭಾವ ಬೆಳೆಸಿಕೊಳ್ಳಬಹುದು.

ಇನ್ನೊಬ್ಬರೊಂದಿಗೆ ಹೋಲಿಕೆ ಬೇಡ :– ಚೆನ್ನಾಗಿ ಓದುವ ಮಕ್ಕಳನ್ನು ಹೋಲಿಸಿ ಹಂಗಿಸುವುದು ಸರಿಯಾದ ಮಾರ್ಗವಲ್ಲ. ಅದರ ಬದಲು 'ಓದಿ–ಅರ್ಥ ಮಾಡಿಕೊಂಡರೆ ಅವರಿಗಿಂತ ನೀನೇ ಮುಂದು'ಎಂದು ಹುರಿದುಂಬಿಸಿದರೆ ಸಾಕು. . . .

**ಓದಿನ ಸಮಯ :–** ಬೆಳಗಿನ ಓದು ಅತ್ಯುತ್ತಮ. ಕೆಲ ಮಕ್ಕಳು ರಾತ್ರಿ ಬಹಳ ಸಮಯ ಓದಿ ಬೆಳಿಗ್ಗೆ ತಡವಾಗಿ ಏಳುತ್ತಾರೆ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಮಕ್ಕಳಿಗೆ ಯಾವಾಗ ಸೂಕ್ತ ವೆನಿಸುತ್ತದೋ, ಯಾವಾಗ ಓದಿದರೆ ಹೆಚ್ಚು ನೆನಪಿನಲ್ಲಿ ಉಳಿಯುತ್ತದೋ ಆಗ ಅವರು ಓದಲು ಅವಕಾಶ ಕೊಡಬೇಕು. ಅದಕ್ಕೆ ಪ್ರತಿ ದಿನ ನಿಗಧಿತ ಸಮಯವನ್ನು ನಿಗಧಿ ಪಡಿಸಿದರೆ ಒಳ್ಳೆಯದು.

ಬುಕ್ ಕ್ಲಬ್ :– ಮಕ್ಕಳು ತಮ್ಮ ವಯಸ್ಸಿನವರ ಜೊತೆ ಬೆರೆಯಲು ಹೆಚ್ಚು ಇಷ್ಟಪಡುತ್ತಾರೆ. ಮಕ್ಕಳು ಇಷ್ಟ ಪಟ್ಟ ಪುಸ್ತಕವನ್ನು ಆಯ್ದುಕೊಂಡು ಗೆಳೆಯರ ಜೊತೆಯಲಿ ಓದಲಿ. ಅವರೆಲ್ಲರೂ ಒಂದೆಡೆ ಕುಳಿತು ಓದಲಿ. ಒಂದೇ ಪುಸ್ತಕ ಓದಲು ಆಶಿಸಿದರೆ ಒಬ್ಬೊಬರು ಒಂದೊಂದು ಪ್ಯಾರ ಓದಲಿ. ಅವರಿಗೆ ಇಷ್ಟವಾದ ಕಥೆ, ಪ್ರಾಣಿ, ಅಂಶಗಳನ್ನು ಗಮನಿಸಿ ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಅದಕ್ಕೆ ಅನುಗುಣವಾಗಿ ಅವರು ಇಷ್ಟ ಪಡುವ ಪುಸ್ತಕಗಳ ಸಂಗ್ರಹವನ್ನು ಹೆಚ್ಚು ಮಾಡಬೇಕು. ಇದರ ಜೊತೆಗೆ ಗ್ರಂಥಾಲಯದ ದಾರಿಯನ್ನು ತೋರಿಸುವುದು ಒಳಿತು.

**ಪದಬಂಧ :–** ಮಕ್ಕಳಿಗೆ ಶಬ್ಧಗಳ ಫಜಲ್ ಕೊಡಬೇಕು. ಅದನ್ನು ತುಂಬಲು ಪ್ರೇರಣೆ ನೀಡಬೇಕು. ಇದು ಮಗುವಿನಲ್ಲಿ ಮನೋರಂಜನೆಗೆ ದಾರಿ ಮಾಡಿಕೊಡುತ್ತಾ, ಬುದ್ಧಿಶಕ್ತಿಯನ್ನು ಸಾಣೆ ಹಿಡಿಯುತ್ತದೆ. ಬಹಳ ಮುಖ್ಯವಾಗಿ ಪದಗಳ ಭಂಡಾರವನ್ನು ಹೆಚ್ಚಿಸುತ್ತದೆ. ಶಬ್ಧದ ಕಲಿಕೆ, ಅರ್ಥ, ಬಳಕೆ ಬಗ್ಗೆ ಸ್ಪಷ್ಟತೆ ಮೂಡಿಸುತ್ತದೆ. ಯಾವುದೇ ಮಗುವಿರಲಿ ತಾನು ಕಲಿತಿದ್ದನ್ನು ವ್ಯಕ್ತಪಡಿಸಲು ಸದಾ ಹಾತೊರೆಯುತ್ತಿರುತ್ತದೆ. ಅದಕ್ಕೆ ನಾನಾ ದಾರಿ ಹುಡುಕುತ್ತಿರುತ್ತದೆ. ಅದಕ್ಕೆ ಸರಿಯಾದ ಅವಕಾಶಗಳನ್ನು ಸೃಷ್ಟಿಸುವುದು ಪಾಲಕರ ಕರ್ತವ್ಯ. ಅದು ಸಮರ್ಪಕವಾದಲ್ಲಿ ಮಕ್ಕಳ ಓದಿನ ತುಡಿತ ಇಮ್ಮಡಿಗೊಳ್ಳುತ್ತದೆ.

ಓದಿನ ಸಮಸ್ಯೆ ಗುರುತಿಸುವಿಕೆ:– ಶಿಕ್ಷಕರಿಗಿಂತ ಹೆಚ್ಚಾಗಿ ಪಾಲಕರು ಮಕ್ಕಳ ಕುರಿತು ವೈಯಕ್ತಿಕ ಗಮನ ಹರಿಸಬಹುದು. ಮಗುವಿನ ಓದು, ಶಬ್ಧದ ಉಚ್ಚಾರ, ಓದನ್ನು ಅರ್ಥಮಾಡಿಕೊಳ್ಳುವಿಕೆಯಲ್ಲಿನ ತೊಂದರೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಅದಕ್ಕೆ ಸರಿಯಾದ ಮಾರ್ಗದರ್ಶನ ಮಾಡಬೇಕು. ಉದಾಹರಣೆಗೆ ಒಂದು ಶಬ್ಧ ಓದಲು ಮಗುವಿಗೆ ಕಷ್ಟವಾಗುತ್ತಿದ್ದರೆ ಅದನ್ನು ಓದಲು ಬೇರೆ ಬೇರೆ ಸರಳ ದಾರಿಗಳನ್ನು ಪರಿಚಯಿಸಬೇಕು. ಅಗತ್ಯಬಿದ್ದರೆ ಆ ಶಬ್ಧವನ್ನು ಬದಲಿಸಬಹುದು. ಅದೇ ಅರ್ಥ ಕೊಡುವ ಸರಳವಾದ ಬೇರೆ ಶಬ್ಧ ಬಳಸುವುದು. ಸರಿಯಾದ ರೀತಿಯಲ್ಲಿ ಶಬ್ಧ ನೀಡಿ ಮಗುವಿನ ಓದಿನ ಅಭಿರುಚಿಯನ್ನು ಪೋಷಿಸಬೇಕು.

ಓದಿನ ಹಲವು ಚಟುವಟಿಕೆಗಳ ಪರಿಚಯ :– ಓದನ್ನು ಮಗುವಿನ ಜೀವನದ ಒಂದು ಅವಿಭಾಜ್ಯ ಅಂಗವಾಗುವಂತೆ ಮಾಡಬೇಕು. ಓದು ಅಂದರೆ ಬರೀ ಪುಸ್ತಕದಲ್ಲಿರುವುದು ಎಂದು ಸೀಮೀತವಾಗಿ ತಿಳಿಯಬಾರದು. ಅದಕ್ಕೆ ಬದಲಾಗಿ ಓದಲು ಪೂರಕವಾದ ಅವಕಾಶಗಳನ್ನು ತಿಳಿಸಬೇಕು. ಉದಾಹರಣೆಗೆ ರಸ್ತೆ ಬದಿಯ ಮಾರ್ಗದರ್ಶನದ ಫಲಕಗಳನ್ನು ಓದುವುದು, ಭಿತ್ತಿ ಚಿತ್ರಗಳು, ಪೋಸ್ಟರ್, ಕರಪತ್ರ, ಪತ್ರಿಕೆಗಳು. . . . . .ಆಟದ ನಿಯಮಗಳು, ವಾತಾವರಣದ ವರದಿಗಳು, ಸಿನೀಮಾ ವೀಕ್ಷಿಸುವಾಗ ಆಲಿಸುವುದು, ಮಾಹಿತಿ ಹಂಚುವಾಗ ಈ ರೀತಿ ನಾನಾ ಅವಕಾಶಗಳ ದಾರಿಯನ್ನು ತೋರಿಸಿಕೊಡಬೇಕು. ಮಕ್ಕಳು ಸಮಯವನ್ನು ಹಾಳು ಮಾಡಿಕೊಳ್ಳದೇ ಸದುಪಯೋಗಪಡಿಕೊಳ್ಳುವಂತೆ ತಿಳಿಸಬೇಕು. ಅವಕಾಶ ಸಿಕ್ಕಾಗಲೆಲ್ಲಾ ಓದಲು ಪ್ರೇರೇಪಿಸಬೇಕು. ಖಾಲಿ ವೇಳೆಯಲ್ಲಿ, ಕಾಯುವ ಸನ್ನಿವೇಷಗಳಲ್ಲಿ ಸಮಯ ವ್ಯಯ ಮಾಡದೇ ಏನಾದರೂ ಓದಲು ಉತ್ತೇಜಿಸಬೇಕು.

ಬೇರೆ ಬೇರೆ ಉಪಕರಣಳೂ ಇವೆ:– ಓದು ಬರೀ ಮುದ್ರಣದ ಪುಸ್ತಕಕ್ಕೆ ಮಾತ್ರ ಎಂದು ತಿಳಿಯಬಾರದು. ಅದರ ಹೊರತಾಗಿ ಇಂದು ಮುಂದುವರೆದಿರುವ ತಂತ್ರಜ್ಞಾನದ ಸದುಪಯೋಗ ಮಡಿಕೊಳ್ಳಬೇಕು. ಅಂದರೆ ಮೊಬೈಲ್, ಕಂಪ್ಯೂಟರ್, ಟ್ಯಾಬ್, ಆಡಿಯೋ ಸಿ.ಡಿ. . .ಇತ್ಯಾದಿಗಳನ್ನು ಬಳಸಿ ಓದಿನಲ್ಲಿ ಆಸಕ್ತಿ ಮೂಡಿಸಬಹುದಾಗಿದೆ. ಇಂದು ಅಂತರಜಾಲಗಳಲ್ಲಿ ಎಲ್ಲ ಭಾಷೆಗಳ ಪುಸ್ತಕಗಳು, ಅಗತ್ಯ ಮಾಹಿತಿಗಳು ಉಚಿತವಾಗಿ ಸಿಗುತ್ತವೆ. ಅವುಗಳನ್ನು ಡೌನ್‌ಲೋಡ್ ಮಾಡಿಕೊಂಡು, ಹಿರಿಯರು ಮೊದಲು ಓದಿ ನಂತರ ಮಕ್ಕಳಿಗೆ ಓದಲು ಅವಕಾಶ ಕೊಡಬೇಕು. ಕೆಲವರು ಪುಸ್ತಕಗಳನ್ನು ಆಡಿಯೋ ರೂಪದಲ್ಲಿಯೂ ಹೊರತರುತ್ತಿದ್ದಾರೆ. ಅದನ್ನು ಆಲಿಸಲು ಪ್ರೇರಣೆ ನೀಡಬೇಕು. ಈ ರೀತಿಯಾಗಿ ನಾನಾ ಉಪಕರಣಗಳನ್ನು ಬಳಸಿ ಓದಿನ ರುಚಿ ಹಚ್ಚಿಸಿದರೆ ಸಾಕು ಮುಂದಿನದು ಅವರೇ ತಮ್ಮ ಓದನ್ನು ನೋಡಿಕೊಳ್ಳುತ್ತಾರೆ.

ಓದಿನ ಜೊತೆ ಇತರೆ ಹವ್ಯಾಸಗಳೂ ಇರಲಿ :– ಬೇರೆ ಬೇರೆ ಹವ್ಯಾಸಗಳಿಂದ ಮಗುವನ್ನು ದೂರವಿಟ್ಟು ಸದಾ ಓದುವ ಮಂತ್ರ ಜಪಿಸುವುದು ಒಳ್ಳೆಯದಲ್ಲ. ಸದಾ ಓದುತ್ತಿರಲು ಅವರು ಭಾವನೆ ಇಲ್ಲದ ನಿರ್ಜೀವ ವಸ್ತುಗಳಲ್ಲ. ಒಬ್ಬ ಮನುಷ್ಯ ಎಷ್ಟು ಸಮಯ ಓದಲು ಸಾಧ್ಯವಿದೆ?. ಅದರಲ್ಲೂ ಮಕ್ಕಳು ಶಾಲೆ, ಮನೆ ಕೆಲಸ, ಟ್ಯೂಷನ್ ಇತ್ಯಾದಿಗಳಿಂದ ಕುಗ್ಗಿರುವಾಗ ಮತ್ತೆ ಓದು ಎಂದರೆ ಅಲರ್ಜಿಯಾಗಿ ಮಗುವಿನ ಸ್ವಾತಂತ್ರ ಕಿತ್ತುಕೊಂಡಂತಾಗುತ್ತದೆ. ಅದಕ್ಕೆ ಇದು ಪೋಷಕರ ಜಾಣ್ಮೆಯನ್ನು ಅವಲಂಬಿಸಿದೆ.

**ಪ್ರೋತ್ಸಾಹ ಅತ್ಯಗತ್ಯ :–** ಪಾಲಕರ ಪ್ರತಿಕ್ರಿಯೆಯು ಮಕ್ಕಳ ಓದಿಗೆ ಸಾಕಷ್ಟು ಬಲ ನೀಡುತ್ತದೆ. ಮಕ್ಕಳ ಓದು ಮತ್ತು ಅದಕ್ಕೆ ಹಾಕಿದ ಶ್ರಮಗಳಿಗೆ ಬೆನ್ನು ತಟ್ಟುವುದನ್ನು ಮರೆಯಬಾರದು. ಪ್ರೋತ್ಸಾಹ, ಉತ್ತೇಜನ ಸಿಕ್ಕಾಗ ಮಗುವಿಗೆ ಆನೆ ಬಲ ಬಂದಂತಾಗುತ್ತದೆ. ಆ ನಿಟ್ಟಿನತ್ತ ದಾಪುಗಾಲು ಹಾಕಲು ಪ್ರಯತ್ನಿಸುತ್ತದೆ. ಹಾಗಾಗಿ ಶಬ್ಬಾಶ್ ಹೇಳಿದರೆ ನಾವು ಕಳೆದುಕೊಳ್ಳುದೇನೇನು ಇಲ್ಲ, ಬದಲಾಗಿ ಪಡೆಯುವುದು ಬಹಳಷ್ಟು ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕು.

ಈ ಹಾದಿಗಳನ್ನು ಸರಿಯಾಗಿ ಅರಿತುಕೊಂಡು ಪಾಲಕರು ಸರಿಯಾದ ಹೆಜ್ಜೆ ಹಾಕಿದಲ್ಲಿ ಮಕ್ಕಳಿಗೆ ಇದಕ್ಕಿಂತ ದೊಡ್ಡ ಉಡುಗೊರೆ ಪಾಲಕರಾದವರು ಕೊಡಲು ಸಾಧ್ಯವೇಇಲ್ಲ ಅಲ್ಲವೇ?.




# ಮಿಡ್ಲ್ಯಾಂಡ್ಸ್ ಕನ್ನಡಿಗರಿಂದ ರಾಜ್ಯೋತ್ಸವ ಆಚರಣೆ

## ಯುನೈಟೆಡ್ ಕಿಂಗ್‌ಡಮ್‌ನಲ್ಲಿ 350ಕ್ಕೂ ಅಧಿಕ ಕನ್ನಡಿಗರಿಂದ ಆಚರಣೆ । ಭಾರತೀಯ ಸಂಸ್ಕೃತಿಗೆ ವಿದೇಶಿಗರ ಶ್ಲಾಘನೆ

ಸಾವಿರ ಮೈಲಿ ದೂರಿದ್ದರೇನು, ತನ್ನ ತಾಣದ ಗಟ್ಟಿ ಭಾವ ಮೂಡಿಸುವುದೇ ಮಾತೃ ನೆಲ ಮತ್ತು ಮಾತೃ ಭಾಷೆ.

"ರಾಜ್ಯೋತ್ಸವ ನಮ್ಮ ನಾಡಿನ ಹಬ್ಬ. ಮಿಡ್ಲ್ಯಾಂಡ್ಸ್ ಯುಕೆಯಲ್ಲಿ ನೆಲೆಸಿರುವ ಸಮಸ್ತ ಕನ್ನಡಿಗರು ಕರುನಾಡ ಹಬ್ಬವನ್ನು ಆಚರಿಸುವಲ್ಲಿ ಒಂದಾಗಿದ್ದರು. ನವೆಂಬರ್ 25 ರಂದು ನಡೆದ ಈ ಸಂಭ್ರಮಾಚರಣೆಯಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾರತದ ಕಾನ್ಸುಲೇಟ್ (ಹೆಡ್ ಆಫ್ ಚಾನ್ಸಲರ್ ಬರ್ಮಿಂಗ್ಹ್ಯಾಮ್), ಅಮನ್ ಬನ್ಸಾಲ್, ಲಾರ್ಡ್ ಮೇಯರ್ ಆಫ್ ಕೊವೆಂಟ್ರಿ, ಜಸ್ವಂತ್ ಸಿಂಗ್ ಬಿರ್ಡಿ ಮತ್ತು ಅವರ ಧರ್ಮ ಪತ್ನಿ, ವಿಶೇಷ ಅತಿಥಿಗಳಾಗಿ 777 ಚಾರ್ಲಿ– ನಿರ್ದೇಶಕರಾದ ಕಿರಣರಾಜ್ ಕೆ, ಗೌರವಾನ್ವಿತ ಅತಿಥಿಗಳಾಗಿ ಕಲಾತ್ಮಕ ನಿರ್ದೇಶಕಿ ವಿಧೂಷಿ ಚಿತ್ರಲೇಖಾ ಭೋಲಾರ್ ಉಪಸ್ಥಿತಿಯಲ್ಲಿ ಯುಕೆಯ ಮಿಡ್ಲ್ಯಾಂಡಿನ ಮುನ್ನೂರೈವತ್ತಕ್ಕೂ ಹೆಚ್ಚು ಕನ್ನಡಿಗರು ಭಾಗವಹಿಸಿದ್ದರು.

"ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನ ಸಂಪದಃ । ಶತ್ರು ಬುದ್ಧಿ ವಿನಾಶಾಯ ದೀಪ ಜ್ಯೋತಿ ನಮೋಸ್ತುತೇ॥" ಎಂದು ನೆನೆಯುತ್ತಾ?

"ಹಚ್ಚೇವು ಕನ್ನಡದ ದೀಪ" ಎಂದು ದೀಪ ಪ್ರಜ್ವಲನೆಯ ಮೂಲಕ ಕಾರ್ಯಕ್ರಮವನ್ನ ಅತಿಥಿಗಳು ಪ್ರಾರಂಭಿಸಿದರು.

ನಮ್ಮ ನಾಡಗೀತೆ "ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೇ" ಎಂದು ನಮ್ಮ ನಾಡು ನುಡಿಗೆ ನಮಿಸಿ, "ಎಲ್ಲಾದರೂ ಇರು; ಎಂತಾದರು ಇರು; ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ನಮ್ಮ ಗುಂಪಿನ ಹೊಸ ಲಾಂಛನವನ್ನ ಅತಿಥಿಗಳು ಉದ್ಘಾಟಿಸಿದರು. ಕಲೆ ಮತ್ತು ಸಂಸ್ಕೃತಿ ಭಾರತದ ಅವಿಭಾಜ್ಯ ಅಂಗ. ವಿದೇಶದಲ್ಲಿ ಎಲ್ಲರೂ ಭಾರತೀಯ ಕೌಟುಂಬಿಕ ಮೌಲ್ಯಗಳನ್ನ ಶ್ಲಾಘಿಸುತ್ತಾರೆ. ಇದೆ ಪರಂಪರೆಯ ಅನಾವರಣವಾಗಿ ಭರತನಾಟ್ಯ, ಹಾಡು, ನೃತ್ಯ, ನಾಟಕ, ಸಂಗೀತ ವಾದ್ಯಗಳ ರಸದೌತಣವನ್ನ ಮಿಡ್ಲ್ಯಾಂಡ್ಸ್ ಕನ್ನಡಿಗರು ನೆಲೆಸಿದ್ದ ಅತಿಥಿಗಳಿಗೆ ಉಣಬಡಿಸಿದರು.

ಕಿರಣರಾಜ್ ತಮ್ಮ ಭಾಷಣದಲ್ಲಿ "ಯುಕೆಗೆ ಬಂದು ಎರಡು ತಿಂಗಳುಗಳಾದರೂ! ಇಂದು ಮತ್ತೆ ಬೆಂಗಳೂರಿನಲ್ಲಿ ಇರುವ ಅನುಭವವಾಗುತ್ತಿದೆ" ಎಂದರು. ತಾವು ಕಾಸರಗೂಡಿನ ಮಲಯಾಳಿ ಮಾತೃಭಾಷಿಕರಾದರೂ ಕಲಿತದ್ದು ಕನ್ನಡ ಶಾಲೆಯಲ್ಲಿ ಎಂದು ಹೇಳಿ, ಮಕ್ಕಳಿಗೆ ಕನ್ನಡವನ್ನು ಕಲಿಸಿ ಎಂದು ಘೋಷಿಸಿದರು. ಲಾರ್ಡ್ ಮೇಯರ್ ಆಫ್ ಕೊವೆಂಟ್ರಿ ಹಾಗೂ ಭಾರತದ ಕಾನ್ಸುಲೇಟ್ ಜನರಲ್ ಅಮನ್ ಬನ್ಸಾಲ್‌ರವರು, ಕನ್ನಡಿಗರನ್ನು ಒಗ್ಗೂಡಿಸುವ ಕಾರ್ಯಕ್ರಮವನ್ನ ಶ್ಲಾಘಿಸುವುದರ ಜೊತೆಗೆ, ಭಾರತಕ್ಕೆ ಕರ್ನಾಟಕದಿಂದ ಬಂದ ಅಮೂಲ್ಯ ಕೊಡುಗೆಗಳನ್ನು ನೆನೆದರು. ಮಿಡ್ಲ್ಯಾಂಡ್ಸ್‌ನಲ್ಲಿ ಕಳೆದ 43 ವರ್ಷದಿಂದ ಭರತನಾಟ್ಯ ಕಲಿಸುತ್ತಾ ಬಂದಿರುವ ಕನ್ನಡತಿ ಚಿತ್ರಲೇಖಾ ಬೋಳಾರ್ ಅವರು ಭಾರತೀಯರಿಗೆ ಹಾಗೂ ಬ್ರಿಟನ್ ಜನತೆಗೆ ಕಲಾ ಕ್ಷೇತ್ರದಲ್ಲಿ ಅಪಾರ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಅವರು ಕನ್ನಡ ಭಾಷೆಯನ್ನೂ ಉಪಯೋಗಿಸಿ ಮಕ್ಕಳಿಗೆ ನಮ್ಮ ಸಂಸ್ಕೃತಿ ಕಲಿಸಲು ಕಿವಿಮಾತು ಹೇಳಿದರು. ಎಲ್ಲರೂ ಒಂದುಗೂಡಿ ಕರ್ನಾಟಕದ ರುಚಿಕರವಾದ ಹೋಳಿಗೆ ಊಟ ಮತ್ತು ಸಿಹಿ ಬೀಡವನ್ನು ಆನಂದದಿಂದ ಸವಿದರು.

"ಮಿಡ್ಲ್ಯಾಂಡ್ಸ್ ಕನ್ನಡಿಗರು" ಎಂಬ ಗುಂಪಿನ ಮೂಲಕ ಕರ್ನಾಟಕ ಮತ್ತು ಭಾರತದ ಹಬ್ಬಗಳನ್ನು ಆಚರಿಸಿ, ಯುಕೆಯ ಮಿಡ್ಲ್ಯಾಂಡಿನಲ್ಲಿರುವ ಕನ್ನಡಿಗರನ್ನು ಕಾರ್ಯಕ್ರಮಗಳ ಮೂಲಕ ಒಗ್ಗೂಡಿಸಿ, ನಮ್ಮ ಸಂಸ್ಕೃತಿ ಮತ್ತು ಭಾಷೆಯನ್ನು ಕಟ್ಟಿ ನಿಲ್ಲಿಸುವ ಪ್ರಯತ್ನದಲ್ಲಿ ಇಂದು ಮತ್ತೊಂದೂ ಅಧ್ಯಾಯವನ್ನು ಸೃಷ್ಟಿಸಿದೆವು.

ನಮ್ಮ ಕನಸುಗಳು ಎಲ್ಲಾ ಕನ್ನಡದಲ್ಲೇ ಬರೋದು. ಯಾಕೆಂದರೆ ಅದೇ ನಮ್ಮ ಮಾತೃ ಭಾಷೆ. ಕನ್ನಡ ನಮ್ಮ ಆಡುಭಾಷೆ ಹಾಗಾಗಿ ನಾವು ಬೇಗ ಅದಕ್ಕೆ ಸ್ಪಂದಿಸೋದು. ನಮ್ಮ ಭಾಷೆ ಉಳಿದಿರೋದು ನಮ್ಮೆಲ್ಲರಿಂದ. ಅದು ಬೆಳೆಯೋದು ಯಾವಾಗ ಎಂದರೆ, ನಮ್ಮ ದೈನಂದಿನ ಜೀವನದಲ್ಲಿ ಅದರ ಬಳಕೆ ಹೆಚ್ಚಾದಂತೆ.

ಭಾಷೆಯ ಬಳಕೆಗೆ ಜನರ ಉಪಸ್ಥಿತಿ ಪ್ರಮುಖವಾಗಿದೆ. ಆ ಪ್ರಾಮುಖ್ಯತೆ ಇವತ್ತಿನ ರಾಜ್ಯೋತ್ಸವದ ಮೂಲಕ ಮೂಡಿತು. ಒಂದೇ ದಿನದಲ್ಲಿ ಯುಕೆಯಲ್ಲಿ ಉಜ್ವಲ ಕರ್ನಾಟಕ ನೋಡಿದಾಹಾಗೆ ಆಯಿತು.

ಕನ್ನಡ ಉಳಿಯುವುದರ ಜೊತೆಗೆ ಬೆಳೆಯುತ್ತಲೂ ಇದೆ. ಕನ್ನಡ ಒಂದು ಶಾಸ್ತ್ರೀಯ ಭಾಷೆ. ಯಾಕೆಂದರೆ ಅದು ಅನ್ಯ ಮೂಲದಿಂದ ಪ್ರೇರಿತವಾಗದೆ ತನ್ನದೇ ಆದ ಸ್ವೋಪಜ್ಞ ಸಾಹಿತ್ಯ ಸಂಪ್ರದಾಯವನ್ನು ಹೊಂದಿದೆ. ಹಾಗಾಗಿ ಇದನ್ನ ಬೆಳೆಸುವತ್ತ ಎಲ್ಲರ ಸಣ್ಣ ಗಮನ ಇದ್ದರೆ ನಮ್ಮ ಮಕ್ಕಳ ಕನಸು ಕನ್ನಡದಲ್ಲಿ ಇರುವಂತೆ ಮಾಡಬಹುದು.

> **ಯುಕೆಗೆ ಬಂದು ಎರಡು ತಿಂಗಳುಗಳಾದರೂ ಇಂದು ಮತ್ತೆ ಬೆಂಗಳೂರಿನಲ್ಲಿ ಇರುವ ಅನುಭವವಾಗುತ್ತಿದೆ. ನಾನು ಕಾಸರಗೂಡಿನ ಮಲಯಾಳಿ ಮಾತೃಭಾಷಿಕರಾದರೂ ಕಲಿತದ್ದು ಕನ್ನಡ ಶಾಲೆಯಲ್ಲಿ. ಮಕ್ಕಳಿಗೆ ಕನ್ನಡವನ್ನು ಕಲಿಸಿರಿ**
>
> **– ಕಿರಣರಾಜ್ ಮಿಂಡ್ಲ್ಯಾಂಡ್**



## ಕವಿ ಮನಸು

### ಓ ಹೆಂಗಸರೇ ನೀವೆಷ್ಟು ಒಳ್ಳೆಯವರು

ಓ ಹೆಂಗಸರೇ, ನೀವೆಷ್ಟು ಒಳ್ಳೆಯವರು
ಮನೆ ಗಂಡ ಮಕ್ಕಳೆಂದು
ನಿಮ್ಮೆಲ್ಲಾ ಆಸೆಗಳನ್ನು ಹಾಲಿನಂತೆ
ಕಾಯಿಸಿ ಕೆನೆಯಾಗಿಸುವಿರಲ್ಲ.

ನಿಮ್ಮ ನಿರಾಸೆಗಳನೆಲ್ಲ ಹೆಪ್ಪಾಗಿಸಿ
ಸಿಹಿಮೊಸರ ಜಗಕ್ಕೆ ಬಡಿಸುವಿರಲ್ಲ.

ನಿಮ್ಮೆಲ್ಲ ನೋವುಗಳ ಹುಳಿಮಜ್ಜಿಗೆಗೆ
ಸಮಾಧಾನದ ನೀರ್ಹಾಕಿ ಬಸಿದು
ರುಚಿಕರ ಮಜ್ಜಿಗೆ ಕುಡಿಸುವಿರಲ್ಲ.

ಕಾಪಿಟ್ಟ ಮುನಿಸು ಸಂಕಟಗಳೆಂಬ
ಕೆನೆ ಹುಳಿ ಮೊಸರನ್ನು ಕಡೆದು
ಬೆಣ್ಣೆ ತೆಗೆದು ತಿನ್ನಿಸುವಿರಲ್ಲ

ನಮಗೆ ಗೊತ್ತಿಲ್ಲ ನಿಜ
ನೀವು ಜ್ಞಾನಿಗಳೆಂದು
ನಿಮಗೇ ಗೊತ್ತಲ್ಲ

ಕಾಯದೆ ಹಾಲು ಕೆನೆಗಟ್ಟದು
ಹಾಕದೆ ಹೆಪ್ಪಾಗಿ ಮೊಸರಾಗದು
ಮೊಸರು ಮಜ್ಜಿಗೆಯಾಗಿ
ಬೆಣ್ಣೆ ತೇಲುವ ಪ್ರಕ್ರಿಯೆಯಲ್ಲಿ
ನಿಮ್ಮ ಬದುಕಿನೊಂದಿಗೆ
ನಮ್ಮೆಲ್ಲರ ಬದುಕನ್ನು ಹಸನಾಗಿಸುವ,
ಹಸಿರಾಗಿಸುವ
ಓ ಹೆಂಗಸರೇ ನೀವೆಷ್ಟು ಒಳ್ಳೆಯವರು.

ಅಷ್ಟಲ್ಲದೆ ಆ ದೇವತೆಗಳು
ನಿಮಗೆ ಮಾತೆ ಎಂದಿರುವುದು
ಓ ಹೆಂಗಸರೇ ನೀವೆಷ್ಟು ಒಳ್ಳೆಯವರು

**– ವೀಣಾ ಹೇಮಂತ್ ಗೌಡ ಪಾಟೀಲ್**
**ಮುಂಡರಗಿ ಗದಗ**

# ಕನಕದಾಸರ ಮೌಲ್ಯಗಳು ಇಂದಿಗೂ ಪ್ರಸ್ತುತ

## ನುಡಿದಂತೆ ನಡೆದು ಬಾಳಿದ ಸಂತ ಕವಿ ಭಕ್ತ ಕನಕದಾಸರು | ವಿಧಾನ ಪರಿಷತ್ ಶಾಸಕರಾದ ಹೇಮಲತಾ ನಾಯಕ ಹೇಳಿಕೆ

**■ ಹಂಪಿ ಟೈಮ್ಸ್ ಕೊಪ್ಪಳ**

ನುಡಿದಂತೆ ನಡೆದು ಬಾಳಿದ ಸಂತ ಕವಿ, ಭಕ್ತ ಕನಕದಾಸರ ಜೀವನ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ವಿಧಾನ ಪರಿಷತ್ ಶಾಸಕರಾದ ಹೇಮಲತಾ ನಾಯಕ ಅವರು ಹೇಳಿದರು.

ಜಿಲ್ಲಾಡಳಿತದಿಂದ ನವೆಂಬರ್ 30 ರಂದು ನಗರದ ಸಾಹಿತ್ಯ ಭವನದಲ್ಲಿ ನಡೆದ ಸಂತ ಶ್ರೇಷ್ಠ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಂತಶ್ರೇಷ್ಠ ಭಕ್ತ ಕನಕದಾಸರು ಮತ್ತು ಮಹರ್ಷಿ ವಾಲ್ಮೀಕಿ ಇಬ್ಬರು ಮಹನೀಯರು ಸಹ ಹಿಂದುಳಿದ ಸಮುದಾಯದ ಜನರಿಗೆ ಎರಡು ನಕ್ಷತ್ರಗಳಿದ್ದಂತೆ ಎಂದು ಬಣ್ಣಿಸಿದ ಅವರು, ಮಾನವ ಜನುಮ ದೊಡ್ಡದು ಇದನು ಹಾನಿ ಮಾಡಿಕೊಳ್ಳಬೇಡಿರಿ ಎಂದು ಹಾಡಿ, ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಭಕ್ತ ಕನಕದಾಸರು ಶ್ರಮಿಸಿದರು. ಸಮಾಜದಲ್ಲಿ ತಾವು ಕಂಡುಂಡ ನೋವು ಅವಮಾನಗಳನ್ನೇ ಕಥೆ ಕವಿತೆಗಳನ್ನಾಗಿಸಿದರು. ಕನಕದಾಸರು ರಚಿಸಿದ ಸಾಹಿತ್ಯ ಹಿಂದಿ, ಇಂಗ್ಲೀಷ್ ಸೇರಿದಂತೆ 14 ಭಾಷೆಗಳಿಗೆ ಭಾಷಾಂತರವಾಗಿರುವುದು ಅವರ ಸಾಹಿತ್ಯದ ಘನತೆಯನ್ನು ತೋರುತ್ತದೆ ಎಂದು ತಿಳಿಸಿದರು.



ಮುಖಂಡರಾದ ರಾಜಶೇಖರ ಹಿಟ್ನಾಳ ಅವರು ಮಾತನಾಡಿ, ಹಾಲುಮತ ಸಮುದಾಯದವರು ಸಹ ಮಾತಿಗೆ ತಕ್ಕಂತೆ ನಡೆಯುತ್ತಾರೆ. ಅಂತಹ ಪ್ರಾಮಾಣಿಕತೆ ಮತ್ತು ವಿಶ್ವಾಸವನ್ನು ಮುಂದುವರೆಸಿಕೊಂಡು ಹೋಗಬೇಕು. ಶಿಕ್ಷಣ ಮತ್ತು ಒಗ್ಗಟ್ಟಿಗೆ ಹೆಚ್ಚಿನ ಒತ್ತು ಕೊಡಬೇಕು ಎಂದು ಸಲಹೆ ಮಾಡಿದರು.

ಹೊಸಪೇಟೆಯ ಡಾ.ಶಂಕರ ಆನಂದಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ.ನಾಗಣ್ಣ ಕಿಲಾರಿ ಅವರು ವಿಶೇಷ ಉಪನ್ಯಾಸ ನೀಡಿ, ಬದುಕಿನುದ್ದಕ್ಕೂ ಕನಕದಾಸರು ನೋವು ಅವಮಾನವನ್ನು ಉಂಡೇ ಬಾಳಿದರು. ಅದನ್ನೇ ಬರೆದರು. ಹರಿಭಕ್ತಸಾರ, ಮೋಹನ ತರಂಗಿಣಿ, ನಳ ಚರಿತ್ರೆ ಸೇರಿದಂತೆ ವಿವಿಧ ಪ್ರಮುಖ ಕೃತಿಗಳಲ್ಲಿ ಕನಕದಾಸರ ಜೀವನಾನುಭವ ಹಾಸುಹೊಕ್ಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ಸುನೀಲ್ ವಂಟಗೋಡಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ತಹಸೀಲ್ದಾರರಾದ ವಿಠ್ಠಲ್ ಚೌಗಲಾ, ತಾಪಂ ಕಾರ್ಯನಿರ್ವಹಣಾಧಿಕಾರು ದುಂಡಪ್ಪ ತುರಾದಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀಶೈಲ ಬಿರಾದಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ, ಮುಖಂಡರಾದ ಕೆ.ಬಸವರಾಜ ಹಿಟ್ನಾಳ, ಜನಾರ್ಧನ ಹುಲಗಿ, ಭರಮಪ್ಪ ಹಟ್ಟಿ, ಹನುಮೇಶ ಮುರಡಿ, ಹನುಮಂತ ಅರಸೀಕೆರೆ ಸೇರಿದಂತೆ ಇತರರು ಇದ್ದರು. ಸಿ.ವಿ.ಜಡಿಯವರ ನಿರೂಪಿಸಿದರು.

# ಕಾರಾಗೃಹ ಬಂಧಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮ

## ಎಲ್ಲಾರಲ್ಲಿ ಒಂದಲ್ಲಾ ಒಂದು ಕಲೆ ಇರುತ್ತದೆ | ಡಿ.ಎಚ್.ಓ ಡಾ.ಸುರೇಂದ್ರಬಾಬು ಹೇಳಿಕೆ



**■ ಹಂಪಿ ಟೈಮ್ಸ್ ರಾಯಚೂರು**

ಜಗತ್ತಿನಲ್ಲಿ ಪ್ರತಿಯೊಬ್ಬರಲ್ಲಿಯೂ ಒಂದಲ್ಲಾ ಒಂದು ಕಲೆ, ಪ್ರತಿಭೆ ಅಡಗಿರುತ್ತದೆ ಅಂತಹ ಪ್ರತಿಭೆಗಳನ್ನು ಮುಖ್ಯವಾಹಿನಿ ತರುವ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದು, ಕಾರಾಗೃಹದಲ್ಲಿರುವ ಬಂದೀಖಾನೆ ನಿವಾಸಿಗಳಿಗೂ ಈ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉಣಬಡಿಸುತ್ತಿರುವುದು ಅತ್ಯಂತ ಸಂತಸದ ವಿಚಾರವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಅವರು ಹೇಳಿದರು.

ಅವರು ಡಿ.1ರ(ಶುಕ್ರವಾರ) ನಗರದ ಜಿಲ್ಲಾ ಕಾರಾಗೃಹದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ಸಾಮಸ್ಕೃತಿಕ ಸೌರಭ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ಪ್ರತಿಯೊಬ್ಬರಲ್ಲಿಯೂ ಯಾವುದೋ ಒಂದು ಕಲೆ ಇದ್ದೇ ಇರುತ್ತದೆ.ಪ್ರಾಚೀನಕಾಲದಲ್ಲಿಅಂತಹಕಲೆಗಳನ್ನುಪ್ರೋತ್ಸಾಹಿಸಲಾಗುತ್ತಿದ್ದು, ಅದರಂತೆ ಪ್ರಸ್ತುತ ದಿನಮಾನಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಲೆಗಳನ್ನು ಪ್ರೋತ್ಸಾಹಿಸುವ ಕಾರ್ಯವಾಗುತ್ತಿದೆ ಎಂದು ತಿಳಿಸಿದರು.

ದೈಹಿಕ ಆರೋಗ್ಯ ಎಷ್ಟು ಮುಖ್ಯವೋ ಅದೇ ರೀತಿ ಮಾನಸಿಕ ಆರೋಗ್ಯವೂ ಕೂಡ ಅಷ್ಟೆ ಮುಖ್ಯ ಆದ್ದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಮಾನಸಿಕ ನೆಮ್ಮದಿ ಸಿಗುತ್ತದೆ. ಈ ನೆಮ್ಮದಿಯನ್ನು ಕಾರಾಗೃಹದ ಬಂದೀಖಾನೆ ನಿವಾಸಿಗಳಿಗೂ ನೀಡಲಾಗುತ್ತಿದೆ ಎಂದರು.

ಇದೇ ವೇಳೆ ಜಿಲ್ಲಾ ಕಾರಾಗೃಹದ ಸೂಪರಿಟೆಂಡೆಂಟ್ ಬಿ.ಆರ್ ಅಂದಾನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮನುಷ್ಯ ತಪ್ಪು ಮಾಡುವುದು ಸಹಜ ಆದರೆ ಅದನ್ನು ತಿದ್ದಿ ನಡೆಯುವ ಗುಣ ಅವನಲ್ಲಿ ಹೆಚ್ಚಾಗಬೇಕು. ಕಾರಾಗೃಹದಲ್ಲಿರುವ ಬಂದೀಖಾನೆ ನಿವಾಸಿಗಳಿಗೆ ಸಾಂಸ್ಕೃತಿ ಕಾರ್ಯಕ್ರಮಗಳ ಮೂಲಕ ರಂಜಿಸುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ರಾಜೇಂದ್ರ ಜಲ್ದಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಮಂಗಲಾ. ವೆಂ ನಾಯಕ, ಗ್ರಂಥಾಲಯ ಅಧಿಕಾರಿ ನಿರ್ಮಲಾ, ಸದಾನಂದ ಪೂಜಾರಿ, ಕಾರಾಗೃಹದ ಅಧಿಕಾರಿಗಳು, ಸಿಬ್ಬಂದಿಗಳು, ಬಂದೀಖಾನೆ ನಿವಾಸಿಗಳು, ಕಲಾವಿದರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಮತದಾರ ಪಟ್ಟಿಗೆ ವಿಶೇಷ ನೋಂದಣಿ ಅಭಿಯಾನ

**■ ಹಂಪಿ ಟೈಮ್ಸ್ ರಾಯಚೂರು**

ಮತದಾರರ ಪಟ್ಟಿಗೆ ಹೆಸರನ್ನು ನೊಂದಾಯಿಸಿಕೊಳ್ಳುವ ಮೂಲಕ ಪ್ರತಿಯೊಬ್ಬ ಅರ್ಹ ಮತದಾರ ತನ್ನ ಹಕ್ಕನ್ನು ಪಡೆದುಕೊಳ್ಳಬೇಕು ಅದರಲ್ಲೂ ಮಹಿಳಾ ಮತದಾರರು ಮತದಾರರ ಪಟ್ಟಿಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಹೆಚ್ಚಿನ ಆಸಕ್ತಿ ತೋರಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಕೆ.ಆರ್ ದುರುಗೇಶ ಅವರು ತಿಳಿಸಿದರು.

ಅವರು ಡಿ.1ರ(ಶುಕ್ರವಾರ) ಜಿಲ್ಲೆಯ ರಾಯಚೂರು ಗ್ರಾಮೀಣ ಮತಕ್ಷೇತ್ರ, ಮಸ್ಕಿ ಹಾಗೂ ದೇವದುರ್ಗ ಮತಕ್ಷೇತ್ರಗಳಿಗೆ ಭೇಟಿ ನೀಡಿ ಡಿ.2 ಮತ್ತು 3ರಂದು ಮತದಾರರ ಪಟ್ಟಿಗೆ ಹೆಸರು ನೊಂದಣಿ ಮಾಡಿಕೊಳ್ಳುವ ವಿಶೇಷ ಅಭಿಯಾನವನ್ನುದ್ದೇಶಿಸಿ ಮಾತನಾಡಿದರು.

ರಾಯಚೂರು ಗ್ರಾಮೀಣ, ಮಸ್ಕಿ ಹಾಗೂ ದೇವದುರ್ಗ ಮತಕ್ಷೇತ್ರಗಳಲ್ಲಿ ಮಹಿಳೆಯರು ಹಾಗೂ ಯುವ ಮತದಾರರು ಕಡಿಮೆ ಸಂಖ್ಯೆಯಲ್ಲಿ ಮತದಾರರ ಪಟ್ಟಿಗೆ ತಮ್ಮ ಹೆಸರನ್ನು ನೊಂದಾಯಿಸಿಕೊಮಡಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಮತದಾನದ ಹಕ್ಕನ್ನು ನೀಡಲಾಗಿದ್ದು, ಈ ಹಕ್ಕನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಪ್ರತಿಯೊಂದು ಮತಕ್ಷೇತ್ರದ ವ್ಯಾಪ್ತಿಗೆ ಬರುವ ಶಿಶು ಅಭಿವೃದ್ಧಿ ಅಧಿಕಾರಿಗಳು ಮತದಾನಕ್ಕೆ ಅರ್ಹರಿರುವ ಎಲ್ಲಾ ಮಹಿಲೆಯರನ್ನು ಮತದಾರರ ಪಟ್ಟಿಗೆ ನೊಂದಾಯಿಸುವಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅರ್ಜಿ ನಮೂನೆಗಳನ್ನು ಕೊಡುವುದರ ಮೂಲಕ ಮಾನ್ಯ ಚುನಾವಣಾ ಆಯೋಗದ ನಿರ್ದೇಶನಗಳನ್ನು ಮತದಾರರ ನೋಂದಣಿ ಅರ್ಜಿಯನ್ನು ಭರ್ತಿ ಮಾಡುವುದನ್ನು ಎಲ್ಲಾ ವಿದ್ಯಾರ್ಥಿಗಳಿಗೆ ತಿಳಿಸಿ ಭರ್ತಿ ಮಾಡಿದ ಅರ್ಜಿಗಳನ್ನು ಸ್ಥಳದಲ್ಲಿ ಸ್ವೀಕರಿಸಿ ಆಯಾ ಕ್ಷೇತ್ರದ ತಹಶೀಲ್ದಾರರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಮಸ್ಕಿ ತಹಶೀಲ್ದಾರ ಸುಧಾ ಅರಮನಿ ಸೇರಿದಂತೆ, ತಾಲೂಕು ಮಟ್ಟದ ಅಧಿಕಾರಿಗಳು, ತಾಲೂಕಾ ಶಿಶು ಅಭಿವೃದ್ಧಿ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ವಿವಿಧ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ತುಂಗಭದ್ರಾ ನೀರಿನ ಮಟ್ಟ



| ಶುಕ್ರವಾರ : 01-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1592.94 ಅಡಿ |
| ಒಳ ಹರಿವು | 730 ಕ್ಯುಸೆಕ್ |
| ಹೊರ ಹರಿವು | 4502 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 13.659 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.42 ಅಡಿ |
| ಒಳ ಹರಿವು | 1559 ಕ್ಯುಸೆಕ್ |
| ಹೊರ ಹರಿವು | 7347 ಕ್ಯುಸೆಕ್ |
| ಸಾಮರ್ಥ್ಯ | 91.905 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಸಂಗೀತ ಕಲಾವಿದರಿಗೆ ಪ್ರೋತ್ಸಾಹ ನೀಡಿ

**■ ಹಂಪಿ ಟೈಮ್ಸ್ ರಾಯಚೂರು**

ಜಿಲ್ಲೆಯಲ್ಲಿ ಹಲವಾರು ರೀತಿಯ ಸಂಗೀತ ಕಲಾವಿದರಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ .ಆ ಪ್ರತಿಭೆಗಳು ಹೆಚ್ಚು ಬೆಳೆ ಬೇಕಾದರೆ ಅವರಿಗೆ ಒಂದು ವ್ಯವಸ್ಥಿತವಾದ ವೇದಿಕೆ .ಜೊತೆಗೆ ಕಲಾಭಿಮಾನಿಗಳು ಅಂತವರಿಗೆ ಪ್ರೋತ್ಸಾ ನೀಡುವಂತ ಕೆಲಸ ಮಾಡಬೇಕು .ಅಂದಾಗ ಮಾತ್ರ ಆ ಕಲಾವಿದರ ಸಂಗೀತಕ್ಕೆ ಗೌರವ ನೀಡಿದಂತಾಗುತ್ತದೆ.

ಜಿಲ್ಲೆಯಲ್ಲಿ ಜಾನಪದ. ಭಾವಗೀತೆ .ಭಕ್ತಿಗೀತೆ .ತತ್ವಪದ. ದಾಸ ಸಾಹಿತ್ಯದ ಹೀಗೆ ವಿವಿಧ ರೀತಿಯ ಹಾಡುಗಳನ್ನ ಹಾಡುವ ಕಲಾವಿದರು ನಮ್ಮಲ್ಲಿದ್ದಾರೆ. ಅಂತ ಕಲಾವಿದರಿಗೆ ಪ್ರೋತ್ಸಾ ನೀಡುವುದು ಅವಶ್ಯಕತೆ ಡಾಕ್ಟರ್ ಶರಣಪ್ಪ ಗೋನಾಳ ಅವರು ತಮ್ಮ ಹಲವಾರು ಸಂಗೀತ ಕಾರ್ಯಕ್ರಮವನ್ನು ನೀಡುವುದರ ಮೂಲಕ ಜನರ ಮನಸ್ಸಿನಲ್ಲಿ ತಮ್ಮ ಹೆಸರನ್ನು ಉಳಿಸಿಕೊಂಡಿದ್ದಾರೆ ಎಂದು ಗುರುವಾರ ರಂದು ಸಾಯಂಕಾಲ 6 ಗಂಟೆಗೆ ಜರುಗಿದ ಪ್ರತಿಭಾ ಸುಗಮ ಸಂಗೀತ ಸಂಸ್ಥೆ ರಾಯಚೂರು ಹಾಗೂ ಈಶ್ವರ ದೇವಸ್ಥಾನ ಗಣೇಶ ಕಾಲೋನಿ (ಡ್ಯಾಡಿ ಕಾಲೋನಿ) ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಭಾವ ಸಂಗಮ 2023ರ ಕಾರ್ಯಕ್ರಮವನ್ನು ವಾದ್ಯವನ್ನು ಬಾರಿಸುವ ಮೂಲಕ ಈಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ್ ಮಿರ್ಜಾಪುರವರು ಮಾತನಾಡಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಸವರಾಜ್ ಸಕ್ರಿ ಹಿರಿಯ ನ್ಯಾಯಾವಾಧಿಗಳು. ಶರಣಪ್ಪ ಗೋನಾಳ್ ಮತ್ತು ಪ್ರತಿಭಾ ಗೋನಾಳ್ ಅವರು ಒಳ್ಳೆಯ ಖ್ಯಾತ ಹಾಡುಗಾರರು ಅವರ ಸಂಸ್ಥೆಯಿಂದ ಉತ್ತಮವಾದ ಕಾರ್ಯಕ್ರಮವನ್ನ ಆಯೋಜನೆ ಮಾಡಿದ್ದಾರೆ. ಡಾ ಮಹಾಲಿಂಗಪ್ಪ ಸದಸ್ಯರು ದೇವಸ್ಥಾನ ಸಮಿತಿ ಇವರು ಮಾತನಾಡುತ್ತಾ .ಸಂಗೀತ ಎಲ್ಲರಿಗೂ ಅವಶ್ಯಕ. .ಎಂದು ಹೇಳಿದರು .ಕಾರ್ಯಕ್ರಮದ ಅಧ್ಯಕ್ಷತೆಯ ವಹಿಸಿದ್ದ ಶ್ರೀ ಉದಯ್ ಕುಮಾರ್ ಯಾಪಲದಿನಿ ಇವರು ಮಾತನಾಡುತ್ತಾ. ನಮ್ಮ ಕಾಲೋನಿಯಲ್ಲಿ ಇಂತಹ ಕಾರ್ಯಕ್ರಮವನ್ನು ಪ್ರತಿಭಾ ಸುಗಮ ಸಂಗೀತ ಸಂಸ್ಥೆ ಶ್ರೀ ಈಶ್ವರ ದೇವಸ್ಥಾನ ಸಮಿತಿಯೊಂದಿಗೆ ಹಮ್ಮಿಕೊಂಡಿದ್ದು ಸಂತೋಷದ ಸಂಗತಿ . ಜೊತೆಗೆ ವಿವಿಧ ರೀತಿಯ ಕಲಾವಿದರು ಬಂದಿದ್ದಾರೆ ನಮ್ಮ ಬಡಾವಣೆಯ ಎಲ್ಲಾ ಜನರು ಅತ್ಯಂತ ಆಸಕ್ತಿಯಿಂದ ಆನಂದ ಕುಳಿತುಕೊಂಡು ಕೇಳಿ ಕಲಾವಿದರಿಗೆ ಪ್ರೋತ್ಸಾ ನೀಡಬೇಕೆಂದು ಹೇಳಿದರು. ಕನ್ನಡ ಜಾನಪದ ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ. ಜಿಲ್ಲೆಯಲ್ಲಿ ಹಲವಾರು ಸಂಘ ಸಂಸ್ಥೆಗಳು ತಮ್ಮದೇ ಆದ ವಿವಿಧ ರೀತಿಯ ಸಂಗೀತ ಸೇವೆಯನ್ನು ಮಾಡುತ್ತಿಲಿವೆ. ರಾಯಚೂರಿನ ಪ್ರತಿಭಾ ಸುಗಮ ಸಂಗೀತ ಸಂಸ್ಥೆ ಹಲವಾರು ಉಪಯುಕ್ತವಾದ ಸಂಗೀತ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ತನ್ನದೇ ಆದ ಕಾರ್ಯ ಚಟುವಟಿಕೆಗಳನ್ನು ಉತ್ತಮವಾಗಿ ಮಾಡುತ್ತದೆ. ಈ ಸಂಸ್ಥೆಯ ಮುಖ್ಯಸ್ಥರಾದ ಡಾ. ಶರಣಪ್ಪ ಗೋನಾಳ್ ರವರು ಜಾನಪದ ಅಕಾಡೆಮಿಯ ಸದಸ್ಯರಾಗಿ ಹಲವಾರು ರೀತಿಯ ಕಾರ್ಯಕ್ರಮವನ್ನು ಮಾಡಿದ್ದಾರೆ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದ. ಪ್ರತಿಭಾ ಗೋನಾಳ್ ರವರು ತಾಲೂಕ .ಜಿಲ್ಲಾ .ರಾಜ್ಯ ಮಟ್ಟದಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ನೀಡಿ ಜಿಲ್ಲೆಗೆ ಕೀರ್ತಿ ತರುವಂತ ಕೆಲಸವನ್ನು ಮಾಡಿದ್ದಾರೆ .ಎಂದು ಹೇಳಿದರು. ಕಾರ್ಯಕ್ರಮವನ್ನು ಪ್ರತಿಭಾ ಗೋನಾಳ ರವರು ಪ್ರಾರ್ಥನೆ ಮಾಡಿದರು .ಡಾ ಶರಣಪ್ಪ ಗೋನಾಳ್ ರವರು ಸ್ವಾಗತಿಸಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀ ಈಶ್ವರ ದೇವಸ್ಥಾನ ಸಮಿತಿಯ ಪದಾಧಿಕಾರಿಗಳಾದ .ಶ್ರೀ ಶಿವಯೋಗಿ ಪಾಟೀಲ್. ಶ್ರೀ ಗಿರಿ ಮಲ್ಲನಗೌಡ. .ಶ್ರೀ ಗುರುನಾಥ್ ಪಾಟೀಲ್ ಉಪಸಿತರಿದ್ದರು. ನಂತರ ಕಲಾವಿದರಾದ ಶ್ರೀಮತಿ ಪ್ರತಿಭಾ ಗೋನಾಳ ..ಶ್ರೀಮತಿ ಪದ್ಮಶ್ರೀ ಜೋಶಿ ಕೆರೂರ್. ಶ್ರೀಮತಿ ಶಶಿರೇಖಾ ಶಿಕ್ಷಕಿ. ಶ್ರೀ ಬ್ರಮೇಂದ್ರ .ಶ್ರೀ ಸಿ.ಎನ್ ರಾಘವೇಂದ್ರ. ಮತ್ತು ಸೇತು ಮಾಧವ್ ಡಾ. ಶರಣಪ್ಪ ಗೊನಾಳ. ಸಂಗೀತ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನೀಡಿದರು. ಗ. ಮಹೇಶ್ ಮತ್ತು ಕಲಾತಂಡದಿಂದ ಆಕರ್ಷಣವಾದ ನೃತ್ಯ ಕಾರ್ಯಕ್ರಮ ಜನರ ಮೆಚ್ಚುಗೆ ಪಾತ್ರವಾಯಿತು. ವಿವಿಧ ಕಲಾವಿದರಿಂದ ನಡೆದ ಸಂಗೀತ ಕಾರ್ಯಕ್ರಮ ಅರ್ಥಪೂರ್ಣವಾಗಿ ಜರುಗಿತು.



# ಕ್ರೀಡಾ ಪೋಷಕ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**■ ಹಂಪಿ ಟೈಮ್ಸ್ ಕೊಪ್ಪಳ**

2023–24ನೇ ಸಾಲಿನ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಯೋಜನೆಯಡಿಯಲ್ಲಿ ಈ ಪ್ರಶಸ್ತಿಯನ್ನು ನೀಡುತ್ತಿದ್ದು, ರಾಜ್ಯದಲ್ಲಿ ಕ್ರೀಡಾಪಟುಗಳು ಕ್ರೀಡಾ ಕ್ಷೇತ್ರದಲ್ಲಿ ಸಾಧಿಸಿದ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ ಕ್ರೀಡಾ ಪೋಷಕರಿಗೆ ಪ್ರಶಸ್ತಿಯನ್ನು ನೀಡಿ ಪ್ರೋತ್ಸಾಹಿಸಲಾಗುವುದು. ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಕ್ರೀಡಾಭಿವೃದ್ಧಿಗೆ ಉತ್ತೇಜನ ನೀಡುವುದು ಈ ಪ್ರಶಸ್ತಿಯ ಮೂಲ ಉದ್ದೇಶವಾಗಿರುತ್ತದೆ.

ಈ ಹಿಂದೆ ಈಗಾಗಲೇ ಈ ಪ್ರಶಸ್ತಿಯನ್ನು ಪಡೆದವರು ಅರ್ಹರಿರುವುದಿಲ್ಲ. ಅರ್ಜಿ ನಮೂನೆಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೊಪ್ಪಳ ಇವರಲ್ಲಿ ಪಡೆದು ಭರ್ತಿ ಮಾಡಿ ಡಿಸೆಂಬರ್ 05 ರೊಳಗಾಗಿ ಈ ಕಚೇರಿಗೆ ದ್ವಿ ಪ್ರತಿಯಲ್ಲಿ ಸಲ್ಲಿಸಲು ಸೂಚಿಸಿದೆ.

ಅರ್ಹತೆಗಳು:ಕ್ರೀಡಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ರೀಡೆಯ ಅಭಿವೃದ್ಧಿಗೆ ನೆರವು ನೀಡಿ 05 ವರ್ಷಗಳಲ್ಲಿ ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುಗಳು ಸಾಧನೆಗೈಯಲು ಕೊಡುಗೆ ನೀಡಿದ ಕ್ರೀಡಾ ಪೋಷಕರು ಈ ಪ್ರಶಸ್ತಿಗೆ ಅರ್ಹರಿರುತ್ತಾರೆ. ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯು ಪ್ರಮಾಣ ಪತ್ರ, ಪ್ರಶಸ್ತಿ ಫಲಕ ರೂ.10.00 ಲಕ್ಷ ರೂ.ನಗದು ಬಹುಮಾನ ಒಳಗೊಂಡಿದೆ. ಅನರ್ಹತೆಗಳು:ನೀಡಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸುವುದರ ಜೊತೆಗೆ ಅರ್ಜಿ ಸಲ್ಲಿಸಲು ಆಜೀವ ನಿಷೇಧ ಹೇರಲಾಗುವುದು ಮತ್ತು ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್ ಚಾನಲ್
FREE!
hampitimes epaper
SCAN QR CODE TO JOIN FOLLOW
HAMPI TIMES
whatsapp channel

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಆತ್ಮಸ್ಥೈರ್ಯವಿದ್ದರೆ ಬದುಕು ಭಾರವಾಗದು

## ಹಿರಿಯ ಸಿವಿಲ್ ನ್ಯಾಯಾಧೀಶರು ರಾಜೇಶ್ ಎನ್. ಹೊಸಮನೆ ಹೇಳಿಕೆ | ವಿಶ್ವ ಏಡ್ಸ್ ದಿನಾಚರಣೆಗೆ ಚಾಲನೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಹೆಚ್.ಐ.ವಿ ಸೋಂಕಿನಿಂದ ಹರಡುವ ಏಡ್ಸ್ ಕಾಯಿಲೆಯ ಬಗ್ಗೆ ಜನರಲ್ಲಿ ಇರುವ ಭಯವನ್ನು ದೂರ ಮಾಡುವುದರ ಜೊತೆಗೆ ಹೆಚ್.ಐ.ವಿ ಏಡ್ಸ್‌ನಿಂದ ಉಂಟಾಗುವ ಕಳಂಕ ಮತ್ತು ತಾರತಮ್ಯ, ಹೊಸ ಪ್ರಕರಣ ಹಾಗೂ ಸಾವುಗಳನ್ನು ಸೊನ್ನೆಗೆ ತರಲು ಪ್ರತಿಯೊಬ್ಬರು ಕೈ ಜೋಡಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ರಾಜೇಶ್ ಎನ್. ಹೊಸಮನೆ ಅವರು ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಕಾಲೇಜ್, ನಿತ್ಯಜೀವನ, ಸೌಖ್ಯಬೆಳಕು, ವಿಮುಕ್ತಿ, ಎಫ್.ಪಿ.ಎ.ಐ,ವರ್ಲ್ಡ್ ವಿಸನ್ ಇವರ ಸಹಕಾರದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 1980 ರ ದಶಕದಲ್ಲಿ ಕಂಡುಬಂದ ಹೆಚ್.ಐ.ವಿ ಸೋಂಕಿನಿಂದ ಹರಡುವ ಏಡ್ಸ್ ಕಾಯಿಲೆಯು, ಇಂದು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ತನ್ನ ಪ್ರಭಾವವನ್ನು ಬೀರಿದೆ. ಹೆಚ್.ಐ.ವಿ ಸೋಂಕಿತರನ್ನು ಮಾನವಿಯ ದೃಷ್ಟಿಯಿಂದ ನೋಡುವುದರ ಜೊತೆಗೆ ಧೈರ್ಯ ತುಂಬುವ ಕೆಲಸ ಮಾಡುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಈ ದಿಶೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಜಾಗೃತಿ ಕಾರ್ಯಕ್ರಮಗಳಿಗೆ ಸದಾ ಬೆಂಬಲ ನೀಡಲಾಗುವುದು ಎಂದು ಅವರು ತಿಳಿಸಿದರು.




ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ ರಮೇಶ್ ಬಾಬು ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, 1980 ರಲ್ಲಿ ಮೊದಲ ಬಾರಿಗೆ ಡಿ.01 ರಂದು ಹೆಚ್.ಐ.ವಿ ಸೋಂಕಿನ ತಡೆಗಾಗಿ ಜಾಗತಿಕ ಒಗಟ್ಟು ಹಾಗೂ ಜವಾಬ್ದಾರಿ ಹಂಚಿಕೆ ಎಂಬ ಘೋಷ ವಾಕ್ಯದೊಂದಿಗೆ ಜಾಗೃತಿ ಕಾರ್ಯಕ್ರಮವನ್ನು ಆರಂಭಿಸಿ, ಸಮುದಾಯದ ಪ್ರತಿಯೊಬ್ಬರಿಗೂ ಸೋಂಕು ಹರಡುವ ವಿಧಾನ ಹಾಗೂ ಮುಂಜಾಗೃತೆಗಳ ಕುರಿತು ವ್ಯಾಪಕ ಪ್ರಚಾರ ಕಾರ್ಯವನ್ನು ಕೈಗೊಳ್ಳುವ ಮೂಲಕ ಪ್ರಸ್ತುತ ಸೋಂಕಿನ ಪ್ರಮಾಣವನ್ನು ಗಣನೀಯವಾಗಿ ಕಡಿಮೆಗೊಳಿಸಲಾಗಿದೆ ಎಂದು ತಿಳಿಸಿದರು.

ಕಳೆದ 6 ವರ್ಷಗಳಲ್ಲಿ 682567 ಜನರ ಪರೀಕ್ಷೆ ಮಾಡಲಾಗಿದೆ. ಬಹುಮುಖ್ಯವಾಗಿ ಹೆಚ್.ಐ.ವಿ ಸೋಂಕಿತ ಮಹಿಳೆ ಗರ್ಭಿಣಿಯಾದರೂ ಸಹ ಜನನವಾಗುವ ಮಗು ಹೆಚ್.ಐ.ವಿ ಸೋಂಕಿಲ್ಲದೇ ಜನಿಸಲು ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳಲಾಗಿದೆ. ಇವೆಲ್ಲವುಗಳನ್ನು ನಿರ್ವಹಿಸಲು 2 ಎ.ಆರ್.ಟಿ ಕೇಂದ್ರಗಳು, 7 ಲಿಂಕ್ ಎ.ಆರ್.ಟಿ ಕೇಂದ್ರಗಳು ಒಳಗೊಂಡಂತೆ ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆ ಕೈಗೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೇಳಿದರು.

ಹೆಚ್.ಐ.ವಿ ಭಾದಿತರಿಗೋಸ್ಕರ ಕಾರ್ಯನಿರ್ವಹಿಸುವ ವಿಮುಕ್ತಿ, ನಿತ್ಯ ಜೀವನ, ಸೌಖ್ಯ ಬೆಳಕು ಮೂಲಕ ಲೈಂಗಿಕ ಅಲ್ಪ ಸಂಖ್ಯಾತರನ್ನು ಸಹ ಸೋಂಕಿಗೆ ಬಾಧಿತರಾಗದಂತೆ ನಿರಂತರ ತಪಾಸಣೆ ಹಾಗೂ ಜಾಗೃತಿಯನ್ನು ನೀಡಲಾಗುತ್ತಿದೆ. ಯುವ ಜನತೆಗೆ ಜಾಗೃತಿ ನೀಡಲು 16 ಕಾಲೇಜುಗಳಲ್ಲಿ ರೆಡ್ ರಿಬ್ಬನ್ ಕ್ಲಬ್ ಆರಂಭಿಸಲಾಗಿದ್ದು, ಪ್ರತಿಯೊಬ್ಬರೂ ಹೆಚ್.ಐ.ವಿಯನ್ನು ಸಾಮಾನ್ಯ ಕಾಯಿಲೆ ಎಂದು ಪರಿಗಣಿಸುವ ಮೂಲಕ ಚಿಕಿತ್ಸೆ ವಂಚಿತರನ್ನು ಚಿಕಿತ್ಸೆ ಕೊಡಿಸಿ ಮುಖ್ಯವಾಹಿನಿಗೆ ತರುವ ಕಾರ್ಯವನ್ನು ಎಲ್ಲರೂ ಮಾಡುವಂತೆ ವಿನಂತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಜಿಲ್ಲಾ ಏಡ್ಸ್ ನಿರ್ಮೂಲನಾಧಿಕಾರಿ ಹಾಗೂ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಮಾನಸಿಕ ತಜ್ಞರಾದ ಡಾ.ರೋಹನ್ ಮಾನಸಿಕ ಕಾಯಿಲೆಗೆ ಆಪ್ತ ಸಮಾಲೋಚನೆಗಾಗಿ 14416 ಉಚಿತ ಸಹಾಯವಾಣಿಯ ಮಾಹಿತಿ ನೀಡಿದರು.

ವೇದಿಕೆ ಮೇಲೆ ವಿಮ್ಸ್ ಐಟಿಸಿಟಿ ನೋಡಲ್ ಅಧಿಕಾರಿ ಡಾ.ಮರಿಗೌಡ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪೂರ್ಣಿಮ ಕಟ್ಟಿಮನಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಆರ್.ಅನಿಲ್ ಕುಮಾರ್, ನಿತ್ಯ ಜೀವನ ಸಂಸ್ಥೆಯ ಹೇಮಲತ ಇದ್ದರು. ಕಾರ್ಯಕ್ರಮದಲ್ಲಿ ಎ.ಆರ್.ಟಿ ವೈದ್ಯಾಧಿಕಾರಿ ಡಾ.ದಿನೇಶ್‌ಗುಡಿ, ಎಫ್.ಪಿ.ಎ.ಐ ವ್ಯವಸ್ಥಾಪಕಿ ವಿಜಯಲಕ್ಷ್ಮಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್.ದಾಸಪ್ಪನವರ, ಜಿಲ್ಲಾ ಏಡ್ಸ್ ಮೇಲ್ವಿಚಾರಕ ಗಿರೀಶ್, ಸರಳಾದೇವಿ ಕಾಲೇಜಿನ ಎನ್.ಎಸ್.ಎಸ್.ಅಧಿಕಾರಿ ಲಕ್ಕಣ್ಣ, ಡಾ.ಪಲ್ಲವಿ, ರಮಾಭಾಯಿ, ಹೊನ್ನೂರಪ್ಪ, ಮಂಜುನಾಥ ಸೇರಿದಂತೆ ಸಂಘಸಂಸ್ಥೆಗಳ ಪದಾಧಿಕಾರಿಗಳು, ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಸನ್ಮಾನ:** ಹೆಚ್.ಐ.ವಿ ಏಡ್ಸ್ ನಿಯಂತ್ರಣ ಕಾರ್ಯಕ್ರಮದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ ಸಂಘ ಸಂಸ್ಥೆಗಳು, ವೈದ್ಯಾಧಿಕಾರಿಗಳು, ಆಪ್ತಸಮಾಲೋಚಕರು ಸೇರಿದಂತೆ 14 ಜನರಿಗೆ ಸನ್ಮಾನಿಸಲಾಯಿತು ಹಾಗೂ ಸಂದೀಪ್ ಅವರಿಂದ ಜಾದು ಪ್ರದರ್ಶನ ನಡೆಸಿಕೊಟ್ಟರು. ಜಾಗೃತಿ ಜಾಥಾ: ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಬೆಳಿಗ್ಗೆ ಜಾಗೃತಿ ಜಾಥಾ ಹಮ್ಮಿಕೊಂಡು ನಗರದ ಪ್ರಮುಖ ಸ್ಥಳಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಿತು

# ಡಿ.2ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**



110/11ಕೆ.ವಿ ಸಂಕ್ಲಾಪುರ ವಿದ್ಯುತ್ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದ ರಿಂದ ಡಿ.2ಕ್ಕೆ ಹೊಸಪೇಟೆ ಗ್ರಾಮೀಣ ಶಾಖಾ ವ್ಯಾಪ್ತಿಗೆ ಬರುವ ಕಾಕುಬಾಳು, ಗುಂಡ್ಲು ವದ್ದಿಗೇರೆ, ಕಲ್ಲಹಳ್ಳಿ, ರಾಜಾಪುರ, ಬಸವನದುರ್ಗ ಮತ್ತು ನಾಗೇನಹಳ್ಳಿ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪ್ ಸೆಟ್‌ರೈತರಿಗೆ ವಿದ್ಯುತ್ ವ್ಯತ್ಯಯ ಆಗಲಿದ್ದು, ಈ ಭಾಗದ ರೈತರ ಪಂಪ್‌ಸೆಟ್‌ಗಳಿಗೆ ಅಂದು ಬೆಳಿಗ್ಗೆ 4 ರಿಂದ 10 ಗಂಟೆಯವರೆಗೆ ವಿದ್ಯುತ್ ಸರಬರಾಜು ಆಗಲಿದೆ.

**ಕಮಲಾಪುರ:** ವಿದ್ಯುತ್ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಪ್ರಯುಕ್ತ ಡಿ.2ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯ ವರೆಗೆ ಕಮಲಾಪುರ ಹಾಗೂ ವಿವಿಧ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಲ್ಲಾರೈತ ಬಾಂಧವರು ಹಾಗೂ ಗ್ರಾಹಕರು ಸಹಕರಿಸಬೇಕಾಗಿ ಜೆಸ್ಕಾಂ ಹೊಸಪೇಟೆ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

**ಹೊಸಪೇಟೆ:** 110/11 ಕೆವಿ ಸಂಕ್ಲಾಪುರ ವಿದ್ಯುತ್ ವಿತರಣಾಕೇಂದ್ರದಲ್ಲಿ ಸಿ.ಟಿ ಬದಲಾವಣೆ ಮತ್ತು ಇತರೆ ದುರಸ್ತಿ ಕಾರ್ಯ ನಡೆಯುತ್ತಿರುವ ಪ್ರಯುಕ್ತ ಡಿ.2ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂ ಹೊಸಪೇಟೆ ನಗರಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# ಏಡ್ಸ್ ನಿರ್ಮೂಲನೆಗೆ ಅರಿವೇ ಔಷಧ

**ಮೊದಲ ಪುಟದಿಂದ**

ಕಲ್ಯಾಣಾಧಿಕಾರಿ ಡಾ॥ ಎಲ್.ಆರ್. ಶಂಕರ್ ನಾಯಕ್ ಅವರು ಮಾತನಾಡಿ, 2023ರ ಘೋಷವಾಕ್ಯ "ಸಮುದಾಯಗಳು ಮುನ್ನಡಿಸಲಿ" ಎಂಬುವುದಾಗಿದೆ. ಹೊಸದಾಗಿ ಸೋಂಕಿತರಾದವರಲ್ಲಿ ಹದಿಹರೆಯದವರು ವಿದ್ಯಾರ್ಥಿಗಳು ಇರುವುದು ಆತಂಕಕಾರಿ ವಿಷಯ ಎಂದು ಕಳವಳ ವ್ಯಕ್ತಪಡಿಸಿದರು. ಹದಿಹರಯದವರಿಗೆ ಮತ್ತು ಪೋಷಕರಿಗೆ ಜಾಗೃತರಾಗಬೇಕು. ಸಮುದಾಯಕ್ಕೆ ಅರಿವು ಮೂಡಿಸಿ ಹೆಚ್.ಐ.ವಿ. ಸೋಂಕನ್ನು ಶೂನ್ಯಕ್ಕೆ ತರಲು ಪ್ರಯತ್ನಿಸೋಣ ಎಂದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ. ಜಗದೀಶ್ ಪಾಟ್ಟೆ ಅವರು ಮಾತನಾಡಿ, ಈ ದಿನ ಹೆಚ್.ಐ.ವಿ/ಏಡ್ಸ್ ಬಗ್ಗೆ ಜಾಗೃತಿ ಮತ್ತು ಅರಿವು ಮೂಡಿಸುವುದು ಹಾಗೂ ಸೋಂಕಿಗೆ ಬಲಿಯಾದವರಿಗೆ ಸಂತಾಪ ಸೂಚಿಸುವುದು ಆಗಿರುತ್ತದೆ. ಸೋಂಕಿತರಿಗೆ ದೊರೆಯುವ ಉಚಿತ ಚಿಕಿತ್ಸೆ, ಆರೋಗ್ಯ ಸೌಲಭ್ಯಗಳು, ಎ. ಆರ್.ಟಿ. ಕೇಂದ್ರ, ಐಸಿಟಿಸಿ, ಎಫ್.ಐ.ಸಿ.ಟಿ.ಸಿ ಕೇಂದ್ರಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ವಿಜಯನಗರ ವಕೀಲ ಸಂಘದ ಅಧ್ಯಕ್ಷ ಕೆ.ವಿ. ಬಸವರಾಜು, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ಜಂಬಯ್ಯ, ಡಿ.ಎಲ್.ಓ ಡಾ. ರಾಧಿಕಾ, ಎಫ್.ಡಬ್ಲೂ.ಓ ಡಾ. ವಿನಯ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ। ಭಾಸ್ಕರ್ ಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜಾಥವು ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಚೇರಿ ಆವರಣದಿಂದ ಗಾಂಧಿಚೌಕಿ ಸರ್ಕಲ್, ಕೆ.ಎಸ್. ಆರ್.ಟಿ.ಸಿ. ಬಸ್ ನಿಲ್ದಾಣ ಮಾರ್ಗವಾಗಿ ಸ್ಟೇಷನ್ ರಸ್ತೆಯ ರೋಟರಿಹಾಲ್ ವರೆಗೆ ನಡೆಯಿತು. ಜಾಥದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ, ಶಂಕರ್ ಆನಂದ್ ಸಿಂಗ್ ಸರ್ಕಾರಿ ಕಾಲೇಜು ಎನ್.ಎಸ್.ಎಸ್. ವಿದ್ಯಾರ್ಥಿಗಳು, ರೆಡ್ ರಿಬ್ಬನ್ ಕಾಲೇಜು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ವೈಭವ ಹೆಚ್.ಐ.ವಿ ಸೋಂಕಿತರ ಸಂಘ, ಸೌಖ್ಯ ಬೆಳಕು ಸಮುದಾಯ ಸಂಸ್ಥೆ, ವಿಮುಕ್ತಿ ಮಹಿಳಾ ಏಡ್ಸ್ ತಡೆಗಟ್ಟುವ ಸಂಸ್ಥೆ ಹಾಗೂ ವಿವಿಧ ಸಂಘ– ಸಂಸ್ಥೆಯ ಪದಾಧಿಕಾರಿಗಳು ಮತ್ತು ಸದಸ್ಯರು, ಪೊಲೀಸ್ ಇಲಾಖೆ ಪಾಲ್ಗೊಂಡು ಯಶಸ್ವಿಗೊಳಿಸಿದರು.

# ಹೆಚ್.ಐ.ವಿ ಸೋಂಕಿತರನ್ನು ಮುಖ್ಯ ವಾಹಿನಿಗೆ ತನ್ನಿ

## ಕೂಡ್ಲಿಗಿ ಶಾಸಕ ಡಾ. ಎನ್.ಟಿ ಶ್ರೀನಿವಾಸ್ ಹೇಳಿಕೆ | ಸಮುದಾಯಗಳು ಮುನ್ನಡೆಸಲಿ ಘೋಷವಾಕ್ಯ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಹೆಚ್.ಐ.ವಿ ಸೋಂಕಿತರನ್ನು ಮುಖ್ಯ ವಾಹಿನಿಗೆ ತರಲು ಎಲ್ಲರೂ ಕೈ ಜೋಡಿಸಿ ಎಂದು ಕೂಡ್ಲಿಗಿ ಶಾಸಕರಾದ ಡಾ. ಎನ್.ಟಿ ಶ್ರೀನಿವಾಸ್ ಅವರು ಹೇಳಿದರು.

ಕೂಡ್ಲಿಗಿ ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಆರೋಗ್ಯ ಇಲಾಖೆ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹಿರೇಮಠ ವಿದ್ಯಾಪೀಠ ಪ್ರೌಢಶಾಲಾ ವಿಭಾಗ, ರಾಘವೇಂದ್ರ ಪ್ಯಾರಾ ಮೆಡಿಕಲ್ ಕಾಲೇಜು, ಆರೋಹಣ ಸೊಸೈಟಿ ಬಾರ್ ಸೋಷಿಯಲ್ ಡೆವಲಪ್ಮೆಂಟ್ ಸಂಸ್ಥೆ ಕೂಡ್ಲಿಗಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಶುಕ್ರವಾರ ಕೂಡ್ಲಿಗಿಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ದಿನಾಚರಣೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೆಚ್.ಐ.ವಿ ಏಡ್ಸ್ ನಿಂದ ಉಂಟಾಗುತ್ತಿರುವ ಸಾವನ್ನು ಸೊನ್ನೆಗೆ ತರಲು ಹಾಗೂ ಇದರಿಂದ ಉಂಟಾಗುತ್ತಿರುವ ಕಳಂಕ ಹಾಗೂ ತಾರತಮ್ಯಗಳನ್ನು ಹೋಗಲಾಡಿಸಲು ಸರ್ಕಾರ ಹಾಗೂ ಆರೋಗ್ಯ ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷದ ಘೋಷವಾಕ್ಯ 'ಸಮುದಾಯಗಳು ಮುನ್ನಡೆಸಲಿ' ಎಂಬುವುದಾಗಿದ್ದು, ಹೆಚ್.ಐ.ವಿ ಏಡ್ಸ್ ಮುಕ್ತ ವಾಗುವುದಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಹೇಳಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಎಸ್.ಪಿ ಪ್ರದೀಪ್ ಕುಮಾರ್ ಅವರು ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆಯು ಡಿಸೆಂಬರ್ 1ರಂದು 1988 ರಿಂದ ವಿಶ್ವ ಏಡ್ಸ್ ದಿನವನ್ನಾಗಿ ಆಯೋಜಿಸುತ್ತಾ




ಬಂದಿದೆ. ತಾಲ್ಲೂಕಿನಲ್ಲಿ ಹೆಚ್.ಐ.ವಿ ಏಡ್ಸ್ ಜಾಗೃತಿ ಹಾಗೂ ನಿರ್ಮೂಲನೆಗೆ ಸಾಕಷ್ಟು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೆಚ್.ಐ.ವಿ ನಿಯಂತ್ರಿಸುವಿಕೆಯಲ್ಲಿ ಆರೋಗ್ಯ ಇಲಾಖೆ ಪ್ರಮುಖ ಪಾತ್ರ ವಹಿಸುತ್ತಿದೆ. ಕೊಟ್ಟೂರು ಕೂಡ್ಲಿಗಿಯಲ್ಲಿ ನಾಲ್ಕು ಐಸಿಟಿಸಿ ಕೇಂದ್ರಗಳಿದ್ದು, ಹೆಚ್.ಐ.ವಿ ಸೋಂಕಿತರು, ಲೈಂಗಿಕ ಕಾರ್ಯಕರ್ತೆಯರು ಹಾಗೂ ಲೈಂಗಿಕ ಅಲ್ಪ ಸಂಖ್ಯಾತರಿಗೆ ವಿಶೇಷ ಪಾಲನಾ ಯೋಜನೆ, ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿ ಮನೆ, ಉಚಿತ ರಕ್ತ ಪರೀಕ್ಷೆಗಳು ಮತ್ತು ಚಿಕಿತ್ಸೆ, ಮಾಹಿತಿ ವಿದ್ಯಾಭ್ಯಾಸದ ಸಹಾಯ, ಉನ್ನತ ವಿದ್ಯಾಭ್ಯಾಸ ಹಾಗೂ ವಿದ್ಯಾರ್ಥಿ ವೇತನ, ಮೈತ್ರಿ ಯೋಜನೆ, ಚೇತನ ಯೋಜನೆ, ಮನಸ್ವಿನಿ ಯೋಜನೆ, ಧನಶ್ರೀ ಯೋಜನೆ, ಉಚಿತ ಕಾನೂನು ಸೇವೆಗಳಿವೆ. ಸರ್ಕಾರದ ಈ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕೂಡ್ಲಿಗಿ ತಾಲ್ಲೂಕಿನ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಪಿ.ಶಿವರಾಜ್ ಸೇರಿದಂತೆ ಹಿರೇಮಠ ವಿದ್ಯಾಪೀಠ ಪ್ರೌಢಶಾಲಾ ವಿಭಾಗ, ರಾಘವೇಂದ್ರ ಪ್ಯಾರಾ ಮೆಡಿಕಲ್ ಕಾಲೇಜು, ಆರೋಹಣ ಸೊಸೈಟಿ ಬಾರ್ ಸೋಷಿಯಲ್ ಡೆವಲಪ್ಮೆಂಟ್ ಸಂಸ್ಥೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು, ಶಿಕ್ಷಕರು, ಶಾಲಾ ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಜಾಗೃತಿ ಜಾಥಾ: ಕಾರ್ಯಕ್ರಮದ ಬಳಿಕ ನೇಮಕ ವಿದ್ಯಾಪೀಠ ಆವರಣದಿಂದ ಪಟ್ಟಣದ ಮದಕರಿ ವೃತ್ತದ ವರೆಗೆ ಜಾಗೃತಿ ಜಾಥಾ, ಮಾನವ ಸರಪಳಿ ನಿರ್ಮಿಸಿ, ಹೆಚ್.ಐ.ವಿ ಏಡ್ಸ್ ಜಾಗೃತಿ ಘೋಷಣೆಗಳ ಮೂಲಕ ಅರಿವು ಮೂಡಿಸಲಾಯಿತು.

# ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷರಾಗಿ ಸಿ.ರಾಜಣ್ಣ ಅವಿರೋಧ ಆಯ್ಕೆ

■ **ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಬಳ್ಳಾರಿ ರಸ್ತೆಯಲ್ಲಿ ನೆನೆಗುದಿಗೆ ಬಿದ್ದಿರುವ ಶ್ರೀ ಕಾಳಿಕಾದೇವಿ ದೇವಸ್ಥಾನ ಜೀರ್ಣೋದ್ಧಾರ ಕಾರ್ಯಕ್ಕೆ ಮೊದಲ ಆದ್ಯತೆ ನೀಡಲಾಗುವುದು ಎಂದು ಹೊಸಪೇಟೆ ತಾಲೂಕು ವಿಶ್ವಕರ್ಮ ಸಮಾಜದ ನೂತನ ಅಧ್ಯಕ್ಷ ಸಿ.ರಾಜಣ್ಣ ಹೇಳಿದರು.

ನಗರದ ಶ್ರೀ ಶಿವರಾಮ ಅವಧೂತರ ಆಶ್ರಮದಲ್ಲಿ ವಿಶ್ವಕರ್ಮ ಸಮಾಜದ ಮಹಾಜನ ಸಭೆಯಲ್ಲಿ ಗುರುವಾರ ಜರುಗಿದ ನೂತನ ಆಡಳಿತ ಮಂಡಳಿ ಸದಸ್ಯರ ಆಯ್ಕೆ ಸಂದರ್ಭದಲ್ಲಿ ಮಾತನಾಡಿದರು.

ಸಮಾಜದ ಪ್ರಗತಿ ಹೊಂದಬೇಕಾದರೆ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯ. ಸದಸ್ಯರ ಅವಿರೋಧ ಆಯ್ಕೆಗೆ ಅವಕಾಶ ಕಲ್ಪಿಸಿ ಬೆಂಬಲಿಸುವುದರೊಂದಿಗೆ ಸಹಕಾರ ಸಂದೇಶ ಸಾರಿರುವುದು ಸಾಮಾಜಿಕವಾಗಿ ಕಾರ್ಯೋನ್ಮುಖರಾಗಲು ಪ್ರೇರಣೆಯಾಗಿದೆ. ವಿಶ್ವಕರ್ಮ ಸಮಾಜ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು. ಸಮುದಾಯದ ಯುವಪೀಳಿಗೆಗೆ ಉದ್ಯೋಗವಕಾಶಗಳು ಸೃಷ್ಟಿಯಾಗಬೇಕಿದೆ. ಸರ್ಕಾರದ ಸೌಲಭ್ಯಗಳನ್ನು ಸಮಾಜದ ಅಭಿವೃದ್ಧಿಗೆ ಸದುಪಯೋಗಪಡಿಸಿ ಕೊಳ್ಳುವ ಮೂಲಕ ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

**ನೂತನ ಪದಾಧಿಕಾರಿಗಳು:** ರಾಜಣ್ಣ.ಸಿ (ಅಧ್ಯಕ್ಷರು), ಶಂಕರಾಚಾರಿ.ಬಿ (ಉಪಾಧ್ಯಕ್ಷರು), ಸುರೇಶ ಶಿಲ್ಪಿ (ಪ್ರಧಾನ ಕಾರ್ಯದರ್ಶಿ), ಎಸ್.ಕೆ. ರಾಜಶೇಖರಾಚಾರ (ಖಜಾಂಚಿ), ಕೆ.ರಾಮಲಿಂಗಾಚಾರಿ (ಸಹ ಕಾರ್ಯದರ್ಶಿ), ಗೋಪಾಲ ಆಚಾರ(ಸಹಕಾರ್ಯದರ್ಶಿ), ಸಂಘಟನಾ ಕಾರ್ಯದರ್ಶಿಗಳಾಗಿ ಬಿ.ಸಿರಿಯಾಚಾರ್, ಕೊಟ್ರೇಶ ಶಿಲ್ಪಿ, ಬಾಲರಾಜ ಕೆ.ಸಿ., ಗಂಗಾವತಿ ರಮೇಶ ಆಚಾರ, ಮಾಧ್ಯಮ ವಕ್ತಾರರಾಗಿ ಮರಿಯಮ್ಮನಹಳ್ಳಿ ಕುಬೇರಾಚಾರ, ಸದಸ್ಯರಾಗಿ ಐ.ಭೀಮಾಜಿ, ಬಿ.ಸತ್ಯನಾರಾಯಣ, ಗೋಪಿ ಗೋಲ್ಡ್‌ಸ್ಮಿತ್, ಆನಂದ ಹೊರಪೇಟೆ, ಕಾಶಿಪತಿ, ಸಿದ್ದೇಶ ಶರ್ಮಾ, ವಿನೋದ ಕುಮಾರ್ ಸಿ.ಆರ್., ಕಾಳಪ್ಪ ಬಡಿಗೇರ ಕಮಲಾಪುರ, ಪ್ರಶಾಂತ ಹಡಗಲಿ, ಲೀಲಾಮೂರ್ತಿ ಟೀಚರ್, ನಾಗರಾಜ ಪತ್ತಾರ, ನಾಗರಾಜ ಶಿಲ್ಪಿ, ನಾಗರಾಜ ಬಡಿಗೇರ, ಶಾಂತಮ್ಮ, ಜಯಶ್ರೀ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಆಡಳಿತ ಮಂಡಳಿ ತಿಳಿಸಿದೆ.

# 15 ದಿನಗಳೊಳಗೆ ಅರ್ಜಿ ವಿಲೆಗೆ ಕ್ರಮವಹಿಸಿ: ಶಿವರಾಜ ತಂಗಡಗಿ

■ **ಹಂಪಿ ಟೈಮ್ಸ್ ಕೊಪ್ಪಳ**

ಮಹತ್ವದ 'ಜನತಾ ದರ್ಶನ' ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಅರ್ಜಿಗಳು ಕಾಲಮಿತಿಯೊಳಗೆ ವಿಲೇಯಾಗಲು ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಹೇಳಿದರು.

ಡಿಸೆಂಬರ್ 01ರಂದು ಕುಷ್ಟಗಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಡಿಟೋರಿಯಂ ಹಾಲನಲ್ಲಿ ನಡೆದ ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜನತಾ ದರ್ಶನ ವೇದಿಕೆಯಡಿ ಬೆಳಗ್ಗೆಯಿಂದ ಮಧ್ಯಾಹ್ನ 1 ಗಂಟೆವರೆಗೆ 60 ಅರ್ಜಿಗಳು ಸ್ವೀಕೃತವಾಗಿದ್ದು, ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ಸರಿಯಾಗಿ ಪರಿಶೀಲಿಸಬೇಕು. ಅನವಶ್ಯಕವಾಗಿ ಪೆಂಡಿಂಗ್ ಇಡಬಾರದು. ಯಾವುದೇ ನೆಪ ಹೇಳದೇ ಅರ್ಜಿಗಳನ್ನು ವಿಲೇಗೊಳಿಸಬೇಕು ಎಂದು ಸಚಿವರು 15 ದಿನಗಳ ಗಡುವು ವಿದಿಸಿದರು.

ನಾನಾ ಸಮಸ್ಯೆಗಳನ್ನು ಹೊತ್ತು ಬಹಳಷ್ಟು ಜನರು ತಹಸೀಲ್ ಕಚೇರಿ ಸೇರಿದಂತೆ ಕೆಲವು ಕಚೇರಿಗಳಿಗೆ ಅಲೆಯುವುದು ನಿತ್ಯದ ದೃಶ್ಯಗಳಾಗಿರುತ್ತದೆ. ಇದು ಬದಲಾಗಬೇಕು. ಸಾಮಾನ್ಯ ಜನರು ಕಚೇರಿಗೆ ಅಲೆಯ ಕೂಡದು ಎಂದು ಅಧಿಕಾರಿಗಳಿಗೆ ಸೂಚಿಸಿ ಇದೇ ವೇಳೆ ಎಚ್ಚರಿಕೆ ನೀಡಿದರು.

# ಹಗರಿಬೊಮ್ಮನಹಳ್ಳಿ: ವಿವಿಧ ಸೌಲಭ್ಯಕ್ಕೆ ಅರ್ಜಿಆಹ್ವಾನ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹಗರಿಬೊಮ್ಮನಹಳ್ಳಿ ಪರಸಭೆಯಿಂದ 2023–24ನೇ ಸಾಲಿನ ಎಸ್.ಎಫ್.ಸಿ ಅನುದಾನದ ಶೇ.24.10ಯೋಜನೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿವಿಧ ಸೌಲಭ್ಯಕ್ಕಾಗಿಅರ್ಜಿಆಹ್ವಾನಿಸಲಾಗಿದೆ.

ಸೌಲಭ್ಯಗಳ ವಿವರ: ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯಧನ, ಬಿ.ಇ., ಎಂ.ಬಿ.ಬಿ.ಎಸ್ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನ ಹಾಗೂ ತಾಲ್ಲೂಕು, ಜಿಲ್ಲಾ, ರಾಜ್ಯ, ರಾಷ್ಟ ಮಟ್ಟದಲ್ಲಿ ಸಾಂಸ್ಕೃತಿಕ, ಕ್ರೀಡೆ, ಕಲೆ ಮತ್ತುಇತರೆ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ. ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

ಅರ್ಹ ಆಸಕ್ತ ವಿದ್ಯಾರ್ಥಿಗಳು ಜಾತಿ&ಆದಾಯ ಪ್ರಮಾಣ ಪತ್ರ, ರೇಷನ್‌ಕಾರ್ಡ, ಆಧಾರ್‌ಕಾರ್ಡ್, ಚುನಾವಣಾಗುರುತಿನಚೀಟಿ, ಬ್ಯಾಂಕ್ ಪಾಸ್ ಬುಕ್ ಪ್ರತಿ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರ, ಪ್ರವೇಶಾತಿ ಪಡೆದ ರಶೀದಿ ಪ್ರತಿ, ಅಂಕಪಟ್ಟಿಗಳು, ಇತ್ತೀಚಿನ ನಾಲ್ಕು ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು, ಸಾಂಸ್ಕೃತಿಕ, ಕ್ರೀಡೆ, ಕಲೆ ಮತ್ತುಇತರೆ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಿಸಿದ ಶಾಲಾ–ಕಾಲೇಜಿನಿಂದ ಭಾಗವಹಿಸಿದ ಬಗ್ಗೆ ಆದೇಶ ಪತ್ರ, ಯಾವಚಟುವಟಿಕೆಯಲ್ಲಿ ಭಾಗವಹಿಸಿದ ಬಗ್ಗೆ ಪ್ರಮಾಣ ಪತ್ರದೊಂದಿಗೆಡಿಸೆಂಬರ್ 08 ರೊಳಗಾಗಿ ಪುರಸಭೆಕಾರ್ಯಾಲಯಕ್ಕೆಕಚೇರಿ ವೇಳೆಯಲ್ಲಿ ಅರ್ಜಿ ಸಲ್ಲಿಸಬೇಕುಎಂದು ಹಗರಿಬೊಮ್ಮನಹಳ್ಳಿ ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ

ಇ–ಪೇಪರ್ ಉಚಿತ
ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್‌ಗೆ ಸೇರಿ,
ಇ–ಪೇಪರ್ ಉಚಿತವಾಗಿ ಪಡೆಯಿರಿ
www.hampitimes.com, epaper.hampitimes.com

**AFFIDAVIT**

I, **LAXMIKANTH** S/o **KALMADY KRISHNA MARAKAL** R/o Door No.1061, Sri Nisarga Nilaya, 35th ward, 2nd cross, Opp: All Inida Radio, Hosapete-583201, Vijayanagar Dist.

I have Changed my Name as **LAXMIKANTH** Instead of **Laxmikantha** Sworn Before Notary K. SURABHI DURGA at HOSAPETE vide Affidavit on 01/12/2023

Digital
PHOTOGRAPHY SERVICE
" CAPTURE YOUR PERFECT MOMENT "
WEDDING SHOOTING
FASHION SHOOTING
EVENT COVERAGE
BOOK NOW
9632121359

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA